ವಿಜಯಪುರ | ಸಂಪುಟ 02 | ಸಂಚಿಕೆ 74 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಗುರುವಾರ, ಮೇ 09, 2024

“ಎಚ್‌ಡಿ ಕುಮಾರಸ್ವಾಮಿ, ಎಚ್‌ಡಿ ರೇವಣ್ಣ ಕುಟುಂಬಗಳ ನಡುವಿನ ವೈಷಮ್ಯದಿಂದಾಗಿ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ಹಗರಣ ಪ್ರಕರಣ ಬಹಿರಂಗವಾಗಿದೆ. ಚುನಾವಣೆ ನಂತರ ಪೆನ್‌ಡ್ರೈವ್ ವಿಚಾರ ಸೋರಿಕೆ ಪ್ರಕರಣ ಹೊಸ ಟ್ವಿಸ್ಟ್ ಪಡೆಯಲಿದೆ.”




– ಡಿ.ಕೆ. ಶಿವಕುಮಾರ
ಉಪ ಮುಖ್ಯಮಂತ್ರಿಗಳು

ಮಾಜಿ ಸಿಎಂ. ಎಚ್ ಡಿ ಕುಮಾರಸ್ವಾಮಿ ಬೇಡಿಕೆಗೆ ತಿರಸ್ಕಾರ | ತನಿಖೆ ನಡೆಸಲು ಸಿಐಡಿ ಸಮರ್ಥ | ಗೃಹ ಸಚಿವ ಜಿ.ಪರಮೇಶ್ವರ ಸ್ಪಷ್ಟನೆ

# ಪ್ರಜ್ವಲ್ ಪ್ರಕರಣ ಸಿಬಿಐಗೆ ವಹಿಸಲು ಸರ್ಕಾರ ನಕಾರ

ಬೆಂಗಳೂರು: ಹಾಸನ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಅವರ ರಾಸಲೀಲೆ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂಬ ಮಾಜಿ ಮುಖ್ಯಮಂತ್ರಿ ಎಚ್ ಡಿ ಕುಮಾರಸ್ವಾಮಿ ಅವರ ಬೇಡಿಕೆಯನ್ನು ಗೃಹ ಸಚಿವ ಡಾ ಜಿ ಪರಮೇಶ್ವರ ಅವರು ಬುಧವಾರ ತಿರಸ್ಕರಿಸಿದ್ದಾರೆ.

ಪ್ರಜ್ವಲ್ ರೇವಣ್ಣ ರಾಸಲೀಲೆ ಪ್ರಕರಣದ ತನಿಖೆ ನಡೆಸಲು ರಾಜ್ಯ ಸರ್ಕಾರದ ಸಿಐಡಿ ಸಮರ್ಥವಾಗಿದೆ ಎಂದು ಗೃಹ ಸಚಿವರು ಹೇಳಿದ್ದಾರೆ.

ಕುಮಾರಸ್ವಾಮಿ ಅವರು 100ಕ್ಕೂ ಹೆಚ್ಚು ಪ್ರಶ್ನೆಗಳನ್ನು ಎತ್ತಿದ್ದಾರೆ. ಅವೆಲ್ಲಕ್ಕೂ ನಾನು ಉತ್ತರಿಸುವುದಿಲ್ಲ. ಅವರು ಸಿಬಿಐ ತನಿಖೆ ಮಾಡಬೇಕು ಎಂದು ಕೇಳಿದ್ದರು ನಾವು ಮಾಡುವುದಿಲ್ಲ. ಪ್ರಕರಣದ ತನಿಖೆ ನಡೆಸಲು ಎಸ್‌ಐಟಿ ಸಮರ್ಥವಾಗಿದೆ. ಸೂಕ್ತ ತನಿಖೆ ನಡೆಸುತ್ತೇವೆ ಎಂದು ಗೃಹ ಸಚಿವರು ತಿಳಿಸಿದ್ದಾರೆ.

ಹೊಳೆನರಸೀಪುರ ಜೆಡಿಎಸ್ ಶಾಸಕ ಹಾಗೂ ಪ್ರಜ್ವಲ್ ತಂದೆ ಎಚ್ ಡಿ ರೇವಣ್ಣ ಕೂಡ ಪ್ರಕರಣದಲ್ಲಿ ಆರೋಪಿಯಾಗಿದ್ದು, ಮೂರು ಮಕ್ಕಳ ತಾಯಿಯಾಗಿರುವ ಮಹಿಳೆಯನ್ನು ಅಪಹರಣ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೆ ಮೂವರನ್ನು ಬಂಧಿಸಲಾಗಿದೆ ಎಂದು ಪರಮೇಶ್ವರ ಹೇಳಿದ್ದಾರೆ.

ತನಿಖೆಯ ಪ್ರಗತಿಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಗೃಹ ಸಚಿವರು, ರೇವಣ್ಣ ಮತ್ತು ಅವರ ಸಹಾಯಕ ಸತೀಶ್ ಬಾಬಣ್ಣ ಸೇರಿದಂತೆ ಮೂವರನ್ನು ಬಂಧಿಸಲಾಗಿದೆ. ಮೂರನೇ ವ್ಯಕ್ತಿಯ ಹೆಸರನ್ನು ಬಹಿರಂಗಪಡಿಸುವುದರಿಂದ ತನಿಖೆಯ ಮೇಲೆ ಪರಿಣಾಮ ಬೀರುತ್ತದೆ ಎಂದು ಬಂಧಿತ ಮೂರನೇ ವ್ಯಕ್ತಿಯ ವಿವರಗಳನ್ನು ಹಂಚಿಕೊಳ್ಳಲು ನಿರಾಕರಿಸಿದರು.




ವಿಡಿಯೋ ಸೋರಿಕೆ ಮಾಡಿದವರ ವಿರುದ್ಧ ತನಿಖೆಯಾಗಲಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಪರಮೇಶ್ವರ, ನಾವು ಏನನ್ನೂ ಮುಚ್ಚಿಡಲು ಬಯಸುವುದಿಲ್ಲ. ಪೆನ್ ಡ್ರೈವ್ ಬಗ್ಗೆ ಸಂಪೂರ್ಣ ತನಿಖೆಯಾಗಲಿದೆ ಎಂದರು.

ಇದೇ ವೇಳೆ ಪೊಲೀಸರು ಪೆನ್ ಡ್ರೈವ್ ಹಂಚಿದ್ದಾರೆ ಎಂಬ ಕುಮಾರಸ್ವಾಮಿ ಆರೋಪದ ಬಗ್ಗೆ ಪ್ರತಿಕ್ರಿಯಿಸಿದ ಪರಮೇಶ್ವರ, ಯಾವ ಪೊಲೀಸರು ಅದನ್ನು ವಿತರಿಸಿದರು ಮತ್ತು ಎಲ್ಲಿ ಎಂಬುದನ್ನು ಪರಿಶೀಲಿಸುವತ್ತೇವೆ. ಕುಮಾರಸ್ವಾಮಿ ಅವರ ಆರೋಪಕ್ಕೆ ಸಂಬಂಧಿಸಿದಂತೆ ಅವರಿಗೆ ನೋಟಿಸ್ ನೀಡಬೇಕೇ ಬೇಡವೇ ಎಂಬುದನ್ನು ಎಸ್‌ಐಟಿ ನಿರ್ಧರಿಸಲಿದೆ ಎಂದು ಪರಮೇಶ್ವರ ತಿಳಿಸಿದ್ದಾರೆ.

ಸಂಸದ ಹಾಗೂ ಹಲವು ಮಹಿಳೆಯರನ್ನು ಒಳಗೊಂಡಿರುವ ಸ್ಪಷ್ಟ ವಿಡಿಯೋಗಳಿರುವ ಪೆನ್ ಡ್ರೈವ್ ಹೊಂದಿದ್ದ ಪ್ರಜ್ವಲ್ ರೇವಣ್ಣ ಅವರ ಚಾಲಕ ಕಾರ್ತಿಕ್ ಗೌಡ ಅವರನ್ನು ಬಂಧಿಸದಿರುವ ಬಗ್ಗೆ ಪ್ರತಿಕ್ರಿಯಿಸಿದ ಪರಮೇಶ್ವರ, ಯಾರನ್ನಾದರೂ ಬಂಧಿಸಲು ಸ್ಪಷ್ಟ ಸಾಕ್ಷ್ಯಾಧಾರಗಳು ಇರಬೇಕು ಎಂದರು.

ಸಾಕ್ಷ್ಯಾಧಾರ ಸಿಗುವವರೆಗೂ ಕಾರ್ತಿಕ್ ಅಥವಾ ದೇವರಾಜೇಗೌಡ (ಬಿಜೆಪಿ ನಾಯಕ) ಅವರನ್ನು ಬಂಧಿಸಲು ಸಾಧ್ಯವಿಲ್ಲ ಎಂದು ಗೃಹ ಸಚಿವರು ಸ್ಪಷ್ಟಪಡಿಸಿದ್ದಾರೆ.

## ಎಚ್.ಡಿ ರೇವಣ್ಣಗೆ 7 ದಿನ ನ್ಯಾಯಂಗ ಬಂಧನ

ಬೆಂಗಳೂರು: ಅಪಹರಣ ಪ್ರಕರಣದಲ್ಲಿ ಬಂಧಿತರಾಗಿರುವ ಜೆಡಿಎಸ್ ಶಾಸಕ ಎಚ್ ಡಿ ರೇವಣ್ಣ ಅವರಿಗೆ ಕೋರ್ಟ್ 7 ದಿನ ಕಾಲ ನ್ಯಾಯಂಗ ಬಂಧನಕ್ಕೆ ಆದೇಶಿಸಿದೆ.



ಎಸ್ ಐಟಿ ಕಸ್ಟಡಿ ಇಂದಿಗೆ ಮುಕ್ತಾಯವಾದ ಹಿನ್ನೆಲೆಯಲ್ಲಿ ರೇವಣ್ಣರನ್ನು ಬೆಂಗಳೂರಿನ 17ನೇ ಎಸಿಎಂಎಂ ಕೋರ್ಟ್ ಮುಂದೆ ಹಾಜರುಪಡಿಸಲಾಗಿದ್ದು ನ್ಯಾಯಧೀಶರು ಮೇ 14ರವರೆಗೆ ನ್ಯಾಯಾಂಗ ಬಂಧನಕ್ಕೆ ಆದೇಶಿಸಿದ್ದಾರೆ.


ಏಳು ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಆದೇಶಿದ ಹಿನ್ನೆಲೆಯಲ್ಲಿ ಕೋರ್ಟ್ ಹಾಲ್ ನಿಂದ ಹೊರಬರುವಾಗ ರೇವಣ್ಣ ಕಣ್ಣೀರು ಹಾಕಿದರು. ಎ□□□ಟಿ ಅಧಿಕಾರಿಗಳು ರೇವಣ್ಣರನ್ನು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕರೆದೊಯ್ದಿದ್ದಾರೆ.

### ರಾಜ ನುಡಿ

ಜ್ಞಾನವೆಂಬುದು ‘ರೇಡಿಯಂ’ ಇದ್ದಹಾಗೆ. ಅಂಧಕಾರ ನಮ್ಮನ್ನು ಆವರಿಸುವಾಗಲೆಲ್ಲ ಹೊಳೆಯಲು ಪ್ರಾರಂಭವಾಗುತ್ತದೆ.

–ಡಾ. ರಾಜಶೇಖರ ನಾಗೂರ

### ವಚನ ಚಿಂತನ 375



*‘ನೀನು’ ‘ನಾನು’ ಎಂಬ ಉಭಯಸಂಗವಳಿದು ತಾನು ತಾನಾದ ತ್ರಿಕೂಟವೆಂಬ ಮಹಾಗಿರಿಯ ತುಟ್ಟತುದಿಯ ಮೆಟ್ಟಿ ನೋಡಲು,*
*ಬಟ್ಟಬಯಲು ಕಾಣಬಹುದು ನೋಡಾ ! ಆ ಬಯಲ ಬೆರಸುವಡೆ ತ್ರಿಕೂಟಗಿ–ರಿಯೊಳಗೊಂದು ಕದಳಿಯುಂಟು ನೋಡಾ ! ಆ ಕದಳಿಯ ತಿಳಿದು ಅಲ್ಲಿ ಒಳಹೊಕ್ಕು ನೋಡಲು ತೊಳಗಿ ಬೆಳಗುವ ಜ್ಯೋತಿಯುಂಟು ಕೇಳಾ ! ನಡೆ ಅಲ್ಲಿಗೆ ತಾಯೆ, ಗುಹೇಶ್ವರಲಿಂಗದಲ್ಲಿ ಪರಮಪದವಿ ನಿನಗೆ ಸಯವಪ್ಪುದು ನೋಡಾ*

ಕಲ್ಯಾಣದ ಅನುಭಾವ ಮಂಟಪಕ್ಕೆ ಮೊದಲ ಬಾರಿಗೆ ಪ್ರವೇಶ ಪಡೆದ ಅಕ್ಕಮಹಾದೇವಿಯವರ ಅನುಭಾವದ ನೆಲೆಯನ್ನು ಶರಣರಿಗೆ ತಿಳಿಸುವ ದೃಷ್ಟಿಯಿಂದ ಅಕ್ಕನನ್ನು ಪ್ರಶ್ನಿಸುತ್ತ ಸಮರ್ಪ ಕ ಉತ್ತರ ಪಡೆದು ತೃಪ್ತಿ ಹೊಂದಿದ ಅಲ್ಲಮಪ್ರಭುಗಳು ಅಂತಿಮ ವಾಗಿ ಅಕ್ಕನಿಗೆ ನುಡಿದ ವಚನವಿದು. ಉಡುತಡಿಯಿಂದ ಕಲ್ಯಾಣ ಕ್ಕೆ ಬರುವ ಮಾರ್ಗದಲ್ಲಿಯೇ ನಾನು ಎಂಬ ಅಂಗಭಾವ ಅಳಿದು ನೀನು(ಚೆನ್ನಮಲ್ಲಿಕಾರ್ಜುನನ) ಎಂಬ ಲಿಂಗ ಭಾವದೊಂದಿಗೆ ಪ್ರವೇಶ ಪಡೆದ ಅಕ್ಕನಿಗೆ ಅಲ್ಲಮಪ್ರಭುಗಳು ಇಷ್ಟಲಿಂಗ ದಿಂದ ಮಹಾಲಿಂಗವನು ಕಾಣುವ ವಿಧಾನವನ್ನು ಕಲಿಸಿಕೊಡುತ್ತಾರೆ ಈ ವಿಧಾನದ ಪ್ರಕ್ರಿಯೆಯನ್ನು ಈ ವಚನವು ಒಳಗೊಂಡಿದೆ. ಅಂಗ ಎಂಬ “ನಾನು” ಇಷ್ಟಲಿಂಗವೆಂಬ “ನೀನು” ಎರಡನ್ನು ಅನಿಮಿಷ ದೃಷ್ಟಿಯಿಂದ ಸಂಗಮಿಕರಿಸಿ ಅಳಿದಾಗ ಅಂದರೆ ಲಿಂಗಾಂಗ ಯೋಗ ದ ಪ್ರಕ್ರಿಯೆಯಲ್ಲಿ ಭ್ರೂಮಧ್ಯ (ಎರಡು ಹುಬ್ಬುಗಳ ಮಧ್ಯ)ಭಾಗದಲ್ಲಿಯ ಮೂರನೇ ಕಣ್ಣನ್ನು ತೆರೆದುಕೊಂಡ ನಂತರ ಅಲ್ಲಿ ಬಯಲು ಗೋಚರಿಸುತ್ತದೆ. (ತ್ರಿಕೂಟವೆಂಬ ಮಹಾಗಿರಿಯ ತುಟ್ಟತುದಿಯ ಮೆಟ್ಟಿ ನೋಡಲು,ಬಟ್ಟಬಯಲು ಕಾಣಬಹುದು ನೋಡಾ !) ಆ ಬಯಲು ಬೆರೆಸಲು ಅಲ್ಲಿ ಕದಳಿ ಕಾಣುತ್ತದೆ.ಕದಳಿ ಒಳಹೊಕ್ಕಡೆ ಬೆಳಗು ಕಾಣುವುದು, ಬೆಳಗಿನೊಳಗೆ ಅಂತಿಮವಾಗಿ ಜ್ಯೋತಿ ಕಾಣಬರುವುದು. ಅದುವೇ ಮಹಾಲಿಂಗದರ್ಶನ.ಅಲ್ಲಿಗೆ ಅಕ್ಕನ ಪಯಣ ಸಾಗಲಿ ಎಂದಿರುವರು. ಅಂತರಂಗದ ಈ ಅಂಗ–ಇಷ್ಟಲಿಂಗ–ತ್ರಿಕೂಟ–ಬಯಲು–ಕದಳಿ–ಬೆಳಗು–ಜ್ಯೋತಿ ಎಂಬುದು ಮಹಾಲಿಂಗ ದರ್ಶನದ ದಾರಿ..

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

## ಮೇ.9 ರಿಂದ ಭೂತನಾಳ ಕೆರೆಗೆ ನೀರು

ಉದಯರಶ್ಮಿ ನ್ಯೂಸ್

ವಿಜಯಪುರ: ನಗರದ ಐತಿಹಾಸಿಕ ಭೂತನಾಳ ಕೆರೆಗೆ ಆಲಮಟ್ಟಿ ಜಲಾಶಯದಿಂದ ನೀರು ತುಂಬಿಸಲು ಬೆಳಗಾವಿ ಪ್ರಾದೇಶಿಕ ಆಯುಕ್ತರು ಆದೇಶ ಹೊರಡಿಸಿದ್ದು, ಇದರಿಂದ ನಗರದ ಜನತೆಗೆ ಎಳ್ಳಷ್ಟು ನೀರಿನ ಅಭಾವ ಉಂಟಾಗುವುದಿಲ್ಲ.



ಜನ–ಜಾನುವಾರುಗಳಿಗೆ ಕುಡಿಯುವ ಉದ್ದೇಶಕ್ಕಾಗಿ, ಆಲಮಟ್ಟಿ ಜಲಾಶಯದಿಂದ ಮೇ.9 ರಿಂದ 28 ರವರೆಗೆ ಕೆರೆಗಳಿಗೆ ನೀರು ಹರಿಸಲಾಗುತ್ತಿದ್ದು, ನಗರದ ಭೂತನಾಳ ಕೆರೆಯ ಮೇಲೆ ಅವಲಂಬನೆ ಇರುವ ಮಹಾನಗರ ಪಾಲಿಕೆ ವ್ಯಾಪ್ತಿಯ 4,5,6,10,12 ವಾರ್ಡಗಳಿಗೆ, ಬೇಸಿಗೆ ಮುಗಿಯುವರೆಗೆ ಸಮರ್ಪಕವಾಗಿ ನೀರು ಸರಬರಾಜು ಮಾಡಲು ಯಾವುದೇ ತೊಂದರೆ ಆಗುವುದಿಲ್ಲ. ಇದರಿಂದ ನಗರದ ಜನತೆಯ ನೀರಿನ ಭವಣೆ ತಪ್ಪಿಸಿದಂತಾಗುತ್ತದೆ ಎಂದು ನಗರ ಶಾಸಕರಾದ ಬಸನಗೌಡ ರಾ.ಪಾಟೀಲ ಯತ್ನಾಳ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಪ್ರೊ.ರಾಜು ಆಲಗೂರ ಗೆಲುವಿನ ಅಂತರ, ಅದಕ್ಕೆ ಪೂರಕವಾಗಿರುವ ಅಂಶಗಳ ಕುರಿತು ಸಮಾಲೋಚನೆ

## ರಿಲ್ಯಾಕ್ಸ್ ಮೂಡಿನಲ್ಲಿ ಸಚಿವ ಎಂ.ಬಿ.ಪಾಟೀಲ

ಉದಯರಶ್ಮಿ ನ್ಯೂಸ್

ವಿಜಯಪುರ: ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಪ್ರಚಾರ ಮತ್ತೀತರ ಕಾರ್ಯತಂತ್ರಗಳ ಕುರಿತು ಬ್ಯೂಸಿಯಾಗಿದ್ದ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಈಗ ಮತದಾನ ಮುಕ್ತಾಯವಾಗಿರುವ ಹಿನ್ನೆಯಲ್ಲಿ ರಿಲ್ಯಾಕ್ಸ್ ಮೂಡಿನಲ್ಲಿದ್ದು, ಕಾಂಗ್ರೆಸ್ ಅಭ್ಯರ್ಥಿ ಪ್ರೊ. ರಾಜು ಆಲಗೂರ ಅವರ ಗೆಲುವಿನ ಅಂತರ, ಅದಕ್ಕೆ ಪೂರಕವಾಗಿರುವ ಅಂಶಗಳ ಕುರಿತು ಸಮಾಲೋಚನೆ ನಡೆಸಿದ್ದಾರೆ.



ಚುನಾವಣೆ ಸಂದರ್ಭದಲ್ಲಿ ಪ್ರತಿದಿನ ಬೆಳಿಗ್ಗೆಯಿಂದಲೇ ನಾನಾ ಗ್ರಾಮಗಳಿಗೆ ತೆರಳಿ ಮತದಾರರನ್ನು ಭೇಟಿ ಮಾಡಿದ ಸಚಿವರು ಪ್ರೋ. ರಾಜು ಆಲಗೂರ ಪರ ಮತಯಾಚಿಸಿದ್ದರು. ಅಲ್ಲದೇ, ನಾನಾ ಸಭೆಗಳಲ್ಲಿ ಪಾಲ್ಗೊಂಡು ಕಾಂಗ್ರೆಸ್ ಸರಕಾರ ಜನರಿಗೆ ನೀಡಿರುವ ಗ್ಯಾರಂಟಿ ಯೋಜನೆಗಳು, ಅದರಿಂದ ಪ್ರತಿಯೊಂದು ಕುಟುಂಬಕ್ಕಾದ ಲಾಭಗಳು ಮತ್ತು ಬಿಜೆಪಿಯ ಪೊಳ್ಳು ಭರವಸೆಗಳಿಂದ ಜನಸಾಮಾನ್ಯರಿಗೆ ಉಂಟಾಗಿರುವ ಸಮಸ್ಯೆಗಳ ಕುರಿತು ಮನವರಿಕೆ ಮಾಡಿಕೊಟ್ಟಿದ್ದರು. ಅಲ್ಲದೇ, ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟ ಅಧಿಕಾರಕ್ಕೆ ಬಂದರೆ ನೀಡಲಾಗುವ ಹೊಸ ಪಂಚ ಗ್ಯಾರಂಟಿ ಯೋಜನೆಗಳ ಕುರಿತು ಜಾಗೃತಿ ಮೂಡಿಸಿದ್ದರು.

ಮತದಾನ ಮುಕ್ತಾಯ ಹಿನ್ನೆಯಲ್ಲಿ ಬುಧವಾರ ನಗರದ ತಮ್ಮ ನಿವಾಸದಲ್ಲಿರುವ ಸಚಿವರು, ಭೇಟಿಗೆ ಆಗಮಿಸಿದ ಜಿಲ್ಲೆಯ ನಾನಾ ಭಾಗಗಳ ಮುಖಂಡರಿಂದ ಮತದಾನ ಪ್ರಮಾಣ ಮತ್ತು ಕಾಂಗ್ರೆಸ್ ಅಭ್ಯರ್ಥಿಯ ಗೆಲುವಿನ ಅಂತರದ ಕುರಿತು ಮಾಹಿತಿ ಪಡೆದರು. ನಿಮ್ಮ ಊರಿನಲ್ಲಿ ಎಷ್ಟು ಮತದಾನವಾಗಿದೆ? ಯುವಕರು, ಮಹಿಳೆಯರು ಹಾಗೂ ಹಿರಿಯರ ಉತ್ಸಾಹ ಹೇಗಿತ್ತು? ಬೆಳಿಗ್ಗೆ ಮತದಾನದ ಪ್ರಮಾಣ ಹೇಗೆ ನಡೆಯಿತು ಸೇರಿದಂತೆ ಯಾವ್ಯಾವ ಮತಗಟ್ಟೆ ಮತ್ತು ಊರುಗಳಲ್ಲಿ ನಮಗೆ ಹೆಚ್ಚಿನ ಲೀಡ್ ಸಿಗಬಹುದು ಎಂಬುದರ ಕುರಿತು ಮಾಹಿತಿ ಸಂಗ್ರಹಿಸಿದರು. ಅಲ್ಲದೇ, ಹಲವಾರು ಮುಖಂಡರು ಮೊಬೈಲ್ ಮೂಲಕವು ಸಚಿವರಿಗೆ ಮತದಾನ ಮತ್ತಿತರ ವಿಷಯಗಳ ಕುರಿತು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ತಮ್ಮನ್ನು ಭೇಟಿಯಾದ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಸಚಿವರು, ಬೇಸಿಗೆಯಲ್ಲಿಯೇ ಚುನಾವಣೆ ಬಂದಿದ್ದರಿಂದ ಮತದಾರರಿಗೆ ಬಿಸಿಲಿನ ಬೇಗೆಯಿಂದ ತೊಂದರೆಯಾಗದಂತೆ ಪ್ರಚಾರ ಕಾರ್ಯಕ್ರಮ ನಿಗದಿಪಡಿಸಲಾಗಿತ್ತು. ಪ್ರತಿದಿನ ಬೆಳಿಗ್ಗೆ ಎರಡು ಮತ್ತು ಸಂಜೆ ಮೂರು ಕಡೆಗಳಲ್ಲಿ ಪ್ರಚಾರ ನಡೆಸಲಾಗಿತ್ತು. ಮತದಾನ ಚೆನ್ನಾಗಿ ನಡೆದಿದೆ. ನಮ್ಮ ಅಭ್ಯರ್ಥಿ ಪ್ರೋ. ರಾಜು ಆಲಗೂರ ಅವರು ನಿಶ್ಚಿತವಾಗಿಯೂ ಗೆಲುವು ಸಾಧಿಸಲಿದ್ದಾರೆ. ಕನಿಷ್ಠ ಒಂದು ಲಕ್ಷ ಮತಗಳ ಅಂತರದಿಂದ ಗೆಲ್ಲಲಿದ್ದಾರೆ. ಎರಡನೇ ಹಂತದಲ್ಲಿ ಚುನಾವಣೆ ನಡೆದ ಒಟ್ಟು 14 ಕ್ಷೇತ್ರಗಳ ಪೈಕಿ ಕನಿಷ್ಠ 10 ರಿಂದ 11ಸ್ಥಾನಗಳಲ್ಲಿ ಮತ್ತು ರಾಜ್ಯದಲ್ಲಿ 19 ರಿಂದ 20 ಕ್ಷೇತ್ರಗಳಲ್ಲಿ ನಾವು ಗೆಲುವು ಸಾಧಿಸಲಿದ್ದೇವೆ ಎಂದು ತಿಳಿಸಿದರು.

ಕಳೆದ 10 ವರ್ಷಗಳಲ್ಲಿ ಮೋದಿ ಅವರು ನೀಡಿರುವ ಯಾವುದೇ ಭರವಸೆಗಳನ್ನು ಈಡೇರಿಸಿಲ್ಲ. ಜನ–ರಿಗೆ ಅಚ್ಛೇ ದಿನ್ ಬಂದಿಲ್ಲ. ಯುವಕ–ರಿಗೆ ಉದ್ಯೋಗ ಸಿಕ್ಕಿಲ್ಲ. ಬೆಲೆ ಏರಿಕೆ ನಿಯಂತ್ರಿಸಿಲ್ಲ. ಎಲೆಕ್ಟ್ರಾಲ್ ಬಾಂಡ್ ಹಗರಣಗಳು ಜನರಿಗೆ ಕೇಂದ್ರ ಸರಕಾರದ ಬಗ್ಗೆ ಅಸಮಾಧಾನ ಉಂಟು ಮಾಡಿದ್ದವು. ಈ ಬಾರಿ ಮೋದಿ ಹವಾ ಕೂಡ ಇರಲಿಲ್ಲ. ಬಿಜೆಪಿ ಒಡೆದ ಮನೆಯಾಗಿತ್ತು. ಆದರೆ ರಾಜ್ಯ ಸರಕಾರದ ಪಂಚ ಗ್ಯಾರಂಟಿ ಯೋಜನೆಗಳಿಂದಾಗಿ 10 ಜನರಲ್ಲಿ ಏಳು ಜನ ಮಹಿಳೆಯರು ನಾವು ಗ್ಯಾರಂಟಿ ಪರ ಮತ ಚಲಾಯಿಸುತ್ತೇವೆ ಎಂದು ಹೇಳಿದ್ದರು. ಅಲ್ಲದೇ, ಎಲ್ಲ ಕಡೆ ಸಂಘಟಿತ ಪ್ರಯತ್ನದ ಫಲವಾಗಿ ಕಾಂಗ್ರೆಸ್ ಅಭ್ಯರ್ಥಿ ಪ್ರೊ. ರಾಜು ಆಲಗೂರ ಗೆಲುವು ಸಾಧಿಸಲಿದ್ದಾರೆ ಎಂದು ಸಚಿವ ಎಂ. ಬಿ. ಪಾಟೀಲ ತಿಳಿಸಿದರು.

ಸಚಿವ ಎಂ.ಬಿ.ಪಾಟೀಲರ ಜೊತೆ ಊಟ | ಮನೆಯವರ ಜೊತೆ ಮಾತು | ದೇಗುಲಗಳ ದರ್ಶನ

## ಮತದಾನದ ನಂತರ ನಿರಮ್ಮಳರಾದ ರಾಜು ಆಲಗೂರ

ಉದಯರಶ್ಮಿ ನ್ಯೂಸ್

ವಿಜಯಪುರ: ಜೋರಾದ ಮಳೆ ಬಂದು ಈ ಬಿರು ಬೇಸಿಗೆಯಲ್ಲಿ ಒತ್ತಡದ ಸೆಖೆ ತಂದಂತೆ ಮಂಗಳವಾರ ಲೋಕಸಭೆ ಚುನಾವಣೆ ಮುಗಿದು ಹೋಗಿದ್ದು, ಕಾಂಗ್ರೆಸ್ ಅಭ್ಯರ್ಥಿ ಮತದಾನದ ಮರು ದಿನ ನಿರಾಳ ನಗೆ ಬೀರುತ್ತ ಓಡಾಡಿದ್ದು ಕಂಡು ಬಂತು.



ಚುನಾವಣೆ ಘೋಷಣೆಗೂ ಮುನ್ನವೇ ಕಳೆದ ನಾಲ್ಕು ತಿಂಗಳಿಂದಲೇ ಪ್ರೊ.ರಾಜು ಆಲಗೂರರು ಕಾಲಿಗೆ ಚಕ್ರ ಕಟ್ಟಿದ್ದರು. ನೂರಾ ಇಪ್ಪತ್ತು ದಿನಗಳಿಂದ ಕ್ಷೇತ್ರದ ಊರುಗಳನ್ನು ಸುತ್ತಲು ಆರಂಭಿಸಿದ್ದರು. ಯಾಕೆಂದರೆ ಅವರಿಗೆ ಗೊತ್ತಿತ್ತು, ಈ ಸಲ ಟಿಕೆಟ್ ತಮಗೇ ಎಂದು! ಅಂ–ದುಕೊಂಡಂತೆ ಮೊದಲ ಪಟ್ಟಿಯಲ್ಲಿಯೇ ವಿಜಯಪುರದಿಂದ ಇವರಿಗೆ ಟಿಕೆಟ್ ಘೋಷಣೆಯಾಯಿತು. ಅದೂ ಜಿಲ್ಲೆಯಿಂದ ರಾಜ್ಯದಲ್ಲೇ ದಾಖಲೆ ಎನ್ನುವಂತೆ ಇವರೊಬ್ಬರದೇ ಹೆಸರು ಪಕ್ಷದ ಹೈಕಮಾಂಡ್ ಅಂಗಳ ತಲುಪಿತ್ತು. ಮುಂದೆ ಇವರು ತಿರುಗಿ ನೋಡದೇ ಚುನಾವಣೆಯನ್ನು ಸವಾಲಾಗಿ ತೆಗೆದುಕೊಂಡರು. ಮೊದಲ ದಿನದಿಂದ ಮತದಾನದ ಕೊನೆಯ ದಿನದವರೆಗೂ ಇವರ ವೇಗ ಎಲ್ಲೂ ಕಮ್ಮಿಯಾಗಲಿಲ್ಲ.

ಕುಟುಂಬದ ಜೊತೆ ಸಮಯ..

ಬೆಳಗ್ಗ ಬೇಗನೇ ಎದ್ದ ಆಲಗೂರರು, ಕುಟುಂಬದ ಜೊತೆ ಬೆರೆತರು. ಅವ–ರಿಗೆ ಒಂದಷ್ಟು ಸಮಯ ಕೊಟ್ಟರು. ಇವರು ಚಹಾ ಬದಲು ಬ್ಲ್ಯಾಕ್ ಕಾಫಿ ಕುಡಿಯುವದು ಹೆಚ್ಚು. ಇವತ್ತೂ ಅದೇ ಹೀರುತ್ತ ನಿನ್ನೆಯ ಮತದಾನ ವಿವರಕ್ಕಾಗಿ ಪತ್ರಿಕೆಗಳನ್ನು ತಿರುವಿ ಹಾಕಿದರು. ಸಮಯ 8ರ ಹೊತ್ತಿಗೆ ಇವರ ಹೊಡ್ಕೋ ಕಾಲೊನಿ ಮನೆಗೆ ಕಾರ್ಯಕರ್ತರು, ಮುಖಂಡರ ದಾಂಗುಡಿ. ‘ಸರ್ ಈ ಊರಾಗ ಹಿಂಗಾಯ್ತು ರೀ.. ಅಲ್ಲಿ ನಮ್ದೇ ಲೀಡ್ರೀ.. ಸಾಹೇಬ್ರ ನೀವು ಗೆಲ್ಲೋದು ಗ್ಯಾರಂಟಿ ರೀ..’ ಅನ್ನೋ ಕಲರವ ಶುರುವಾಗಿತ್ತು. ಅಷ್ಟರಲ್ಲಿ ದೃಶ್ಯ ಮಾಧ್ಯಮದವರ ಕ್ಯಾಮರಾ ಹಾಜರ್. ಟಿವಿ ಸೇರಿ ಹಲವು ಪತ್ರಕರ್ತರ ಪ್ರಶ್ನೆಗಳು. ಅದಕ್ಕೆ ಉತ್ತರ ಕೊಟ್ಟ ಆಲಗೂರರು, ‘ನನ್ನ ಗೆಲುವು ಶತಃಸಿದ್ಧ. ಜಿಲ್ಲೆಯ ಎಲ್ಲ ಕಡೆಯಿಂದಲೂ ಕಾಂಗ್ರೆಸ್‌ಗೆ ಒಳ್ಳೆಯ ವರದಿಗಳಿವೆ. ನಮಗೆ ಒಲವಿರುವ ಕಡೆಗಳಲ್ಲೆಲ್ಲ ಭರ್ಜರಿ ಮತದಾನವಾಗಿದೆ. ನಗರ ಪ್ರದೇಶಗಳಲ್ಲಿ ಬಿಜೆಪಿಗೆ ಹೆಚ್ಚಿನ ಮತದಾನವಾಗುವುದು ವಾಡಿಕೆ ಇದ್ದರೂ ಅದೆಲ್ಲ ಈ ಬಾರಿ ಸುಳ್ಳಾಗಿದೆ. ದಶಕಗಳ ನಂತರ ಈ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸುವ ಎಲ್ಲ ಲಕ್ಷಣಗಳಿವೆ’ ಎಂದು ನಗು ಮೊಗದಿಂದ ಹೇಳಿದರು.

ಇದಾದ ನಂತರ ಬಿಎಲ್‌ಡಿಇ ಆವರಣದ ಕಚೇರಿಗೆ ತೆರಳಿ ಅಲ್ಲಿ ಪ್ರಮುಖರೊಂದಿಗೆ ಸೇರಿ ಎಲ್ಲ ಬೆಳವಣಿಗೆಗಳ ಕುರಿತು ಚರ್ಚಿಸಿದರು, ಒಂದಷ್ಟು ಹರಟಿದರು. ಅಷ್ಟೂ ದಿನದ ಅನುಭವಗಳನ್ನು ಹಂಚಿಕೊಂಡು ಹಗುರಾದರು. ಈ ಚುನಾವಣೆಯಲ್ಲಿ ಮಹತ್ವದ ಪಾತ್ರ ವಹಿಸಿದ ತಂಡದ ರೂವಾರಿ ಡಾ.ಮಹಾಂತೇಶ ಬಿರಾದಾರ, ಮುಖಂಡರಾದ ಡಾ.ಸಂಗಮೇಶ ಬಬಲೇಶ್ವರ, ಸುರೇಶ ಹಳ್ಳಿ, ಚಂದ್ರಶೇಖರ ಶೆಟ್ಟಿ, ಡಾ.ಗಂಗಾಧರ ಸಂಬಣ್ಣಿ ಹಾಗೂ ಪ್ರಫುಲ್ ಮಂಗಣ್ಣವರ ಸೇರಿ ಅನೇಕರ ಜೊತೆ ಆಪ್ತವಾಗಿ ಬೆರೆತರು.



### ಮಧ್ಯಾಹ್ನ ಎಂಬಿಪಿ ಜತೆ ಊಟ

ರಾಜು ಆಲಗೂರ ಬುದವಾರ ಬೃಹತ್ ಕೈಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಅವರ ಮನೆಯಲ್ಲಿ ಬಹಳೊತ್ತು ಕಳೆದರು. ಮೂರು ಗಂಟೆಗೂ ಹೆಚ್ಚುಕಾಲ ಅವರೊಂದಿಗಿದ್ದು ಎಲ್ಲ ವಿವರಣೆ ನೀಡಿದರು. ಅವರೊಂದಿಗೆ ಊಟ ಮಾಡಿ, ಖುಷಿಯಿಂದ ಇದ್ದರು. ಚುನಾವಣೆಯ ಯಾವ ಒತ್ತಡವೂ ಅವರಲ್ಲಿ ಇರಲಿಲ್ಲ. ಸಚಿವರು ಕೂಡ ಖುಷಿಯಿಂದ ಇದ್ದರು. ಬ್ಲಾಕ್, ಬೂತ್‌ಗಳ ಮಟ್ಟದಲ್ಲಿ ಯಾವ ಕಡೆ ಎಷ್ಟು ಮತದಾನವಾಗಿದೆ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ಎಷ್ಟು ಮತಗಳು ಬಂದಿರಬಹುದು ಎನ್ನುವ ಮಾತುಗಳು ನಡೆದವು. ಬಹಳ ವರ್ಷಗಳ ನಂತರ ಜಿಲ್ಲೆಯ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪರ ಅಲೆ ಇರುವುದು ಕಂಡಿರುವ ಕುರಿತು ಸಮಾಧಾನದ ಘಳಿಗೆಗಳನ್ನು ಪಾಟೀಲರು, ಆಲಗೂರರೊಂದಿಗೆ ಹಂಚಿಕೊಂಡಿದ್ದು ವಿಶೇಷವಾಗಿತ್ತು. ಸಚಿವರಲ್ಲಿ ಯಾವ ಧಾವಂತವಿರಲಿಲ್ಲ.

# ಶಿಕ್ಷಣ ಮತ್ತು ಸಂಸ್ಕಾರ ಉತ್ತಮ ಬದುಕು ರೂಪಿಸಬಲ್ಲದು

ಉದಯರಶ್ಮಿ ನ್ಯೂಸ್



ಸಿಂದಗಿ: ಶಿಕ್ಷಣದಿಂದ ಮಾತ್ರ ಈ ದೇಶ ಬಲಿಷ್ಠವಾಗಲಿದೆ. ಯೋಗ್ಯ ಶಿಕ್ಷಣ ಮತ್ತು ಸಂಸ್ಕಾರ ನಮ್ಮ ಬದುಕನ್ನೇ ಉತ್ತಮವಾಗಿ ರೂಪಿಸಬಲ್ಲದು ಎಂದು ಶ್ರೀಶೈಲ ಪೀಠದ ಪರಮ ಪೂಜ್ಯ ಜಗದ್ಗುರು ಡಾ.ಚೆನ್ನಸಿದ್ದರಾಮ ಪಂಡಿತರಾಧ್ಯ ಶಿವಾಚಾರ್ಯ ಭಗವತ್ಪಾದಂಗಳವರು ಹೇಳಿದರು.

ತಾಲೂಕಿನ ಕನ್ನೋಳ್ಳಿ ಹಿರೇಮಠದ ಶ್ರೀಜಗದುರು ದಾರುಕಾಚಾರ್ಯರ ಜಾತ್ರಾ ಮಹೋತ್ಸವ ಮತ್ತು ಲಿಂ.ಶ್ರೀ ಮರುಳಾರಾಧ್ಯ ಶಿವಾಚಾರ್ಯರ 110 ನೇ ಜಯಂತ್ಯುತ್ಸವದ ನಿಮಿತ್ಯ ಶ್ರೀ ಸಿದ್ದಲಿಂಗೇಶ್ವರ ಜ್ಞಾನಜ್ಯೋತಿ ವಿದ್ಯಾಪ್ರಸಾರ ಸಂಘದ ಅಡಿಯಲ್ಲಿ ನೂತನವಾಗಿ ನಿರ್ಮಾಣಗೊಂಡ ಮಾತೋಶ್ರೀ ಬಸಲಿಂಗಮ್ಮ ಭಾಳಪ್ಪ ಭೂಸನೂರ ಕಲಾ, ವಾಣಿಜ್ಯ ಪದವಿ ಪೂರ್ವ ಮಹಾವಿದ್ಯಾಲಯವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಾನವನನ್ನು ಮಹಾದೇವನನ್ನಾಗಿ ಪರಿವರ್ತಿಸುವ ಮಹಾಶಕ್ತಿ ಶಿಕ್ಷಣ-ಕ್ಕೆ ಇದೆ. ಪ್ರತಿಯೊಬ್ಬರು ಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ಸಂಸ್ಕಾರ ನೀಡಿದ್ದಲ್ಲಿ ಭಾರತ ಜಗತ್ತಿಗೆ ದೊಡ್ಡ ಶಕ್ತಿಯಾಗಿ ಹೊರ ಹೊಮ್ಮಲಿದೆ ಎಂದ ಅವರು ಲಿಂ.ಮರುಳಾರಾಧ್ಯ ಶಿವಾಚಾರ್ಯರು ಸದಾ ಭಕ್ತರ ಕಲ್ಯಾಣವನ್ನು ಬಯಸಿ ಅವರ ಮುಖದಲ್ಲಿಯೇ ಪರಮಾತ್ಮನನ್ನು ಕಂಡಂತವರು. ಧಾರ್ಮಿಕ ಸಂಸ್ಕಾರ, ಸಾಮಾಜಿಕ ಪ್ರಜ್ಞೆಯನ್ನು ಭಕ್ತರಲ್ಲಿ ಮೂಡಿಸಿ ಜನಮಾನಸದಲ್ಲಿ ಚಿರಸ್ಥಾಯಿಯಾದವರು ಎಂದರು.

ಈ ವೇಳೆ ಭಂಥನಾಳದ ಪೂಜ್ಯ ಶ್ರೀ ವೃಷಬಲಿಂಗ ಮಹಾಸ್ವಾಮಿಗಳು ಮಾತನಾಡಿ, ಕನ್ನೋಳ್ಳಿಯ ಹಿರೇಮಠದ ಧಾರ್ಮಿಕ ಮತ್ತು ಶಿಕ್ಷಣದ ಕಾರ್ಯ ನಿರಂತರವಾಗಿದೆ. ಭಂಥನಾಳದ ಲಿಂ.ಸಂಗನಬಸವೇಶ್ವರ ಮಹಾಸ್ವಾಮಿಗಳು ಜೋಳಿಗೆ ಹಿಡಿದು ಈ ಭಾಗದಲ್ಲಿ ಶಿಕ್ಷಣದ ಪ್ರಸಾರ ಮಾಡದೇ ಇದ್ದಲ್ಲಿ ಈ ಭಾಗ ಅತ್ಯಂತ ಹಿಂದುಳಿದ ಪ್ರದೇಶವಾಗುತ್ತಿತ್ತು. ಅವರ ಪರಿಶ್ರಮದಿಂದ ಈ ಭಾಗದ ಸಾವಿರಾರು ಮಕ್ಕಳು ಉತ್ತಮ ಶಿಕ್ಷಣ ಪಡಿಯುವಂತಾಗಿದೆ. ಆ ನಿಟ್ಟಿನಲ್ಲಿ ಕನ್ನೋಳ್ಳಿಯ ಹಿರೇಮಠವು ಕೂಡಾ ಶಿಕ್ಷಣದ ಕ್ರಾಂತಿಯನ್ನು ಈ ಭಾಗದಲ್ಲಿ ಮಾಡುವಂತಾಗಲಿ ಎಂದು ಶುಭಹಾರೈಸಿದರು.

ಈ ಸಂಧರ್ಭದಲ್ಲಿ ಯಂಕಂಚಿ ಹಿರೇಮಠದ ಪೂಜ್ಯ ಶ್ರೀಅಭಿನವ ರುದ್ರಮುನಿ ಶೀವಾಚಾರ್ಯರು, ಕೋಣ್ಣೂ-ರಿನ ಹೊರಗಿನ ಕಲ್ಯಾಣಮಠದ ಡಾ.ವಿಶ್ವಪ್ರಭುದೇವ ಶಿವಾಚಾರ್ಯರು ಮಾತನಾಡಿ, ಗ್ರಾಮೀಣ ಭಾಗದಲ್ಲಿ ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಬಡ ಅನಾಥ ಮಕ್ಕಳಿಗೆ ಮತ್ತು ಶಿಕ್ಷಣ ನೀಡುವ ಕಾರ್ಯ ಮಾಡುತ್ತಿರುವ ಕನ್ನೋಳ್ಳಿಯ ಹಿರೇಮಠದ ಕಾರ್ಯವನ್ನು ಶ್ಲಾಘಿಸಿದರು.

ಕಾರ್ಯಕ್ರಮದ ವೇದಿಕೆ ಮೇಲೆ ಸಿಂದಗಿ ಸಾರಂಗಮಠದ ಡಾ.ಪ್ರಭು ಸಾರಂಗದೇವ ಶಿವಾಚಾರ್ಯರು, ಬಸವನ ಬಾಗೇವಾಡಿಯ ಶ್ರೀ ಶಿವಪ್ರಕಾಶ ಶಿವಾಚಾರ್ಯರು, ಕನ್ನೋಳ್ಳಿಯ ಹಿರೇಮಠದ ಶ್ರೀ ಸಿದ್ದಲಿಂಗ ಶಿವಾಚಾರ್ಯರು, ಸಿದ್ದಗೊಂಡಪ್ಪಗೌಡ ಪಾಟೀಲ, ಕಂಟೆಪ್ಪ ಸಾಹುಕಾರ ಕೊಲ್ಲೂರ, ಶ್ರೀಶೈಲಗೌಡ ಬಿರಾದಾರ ಮಾಗಣಗೇರಿ, ಶಂಕರಲಿಂಗಯ್ಯ ಹಿರೇಮಠ, ಸಂಗನಗೌಡ ಪಾಟೀಲ, ಸಿದ್ದಪ್ಪ ಟೆಂಗಳಿ, ಮುತ್ತಪ್ಪ ಹರಿ-ಜನ, ಅನೀಲ ಕಡಿಮನಿ, ಶಂಕರ ಬಗಲಿ, ಸಿದ್ದಣ್ಣ ಸಾಹುಕಾರ ಕೊಲ್ಲೂರ, ಭಾಗಪ್ಪ ಶೀವಣಗಿ ಸೇರಿದಂತೆ ಗ್ರಾಮದ ಅನೇಕ ಹಿರಿಯರುಇದ್ದರು. ರೇಣುಕ ಗವಾಯಿಗಳು ಪ್ರಾರ್ಥಿಸಿದರು.

ಉಪನ್ಯಾಸಕ ಸಿದ್ದಲಿಂಗ ಕಿಣಗಿ ನಿರೂಪಿಸಿ ವಂದಿಸಿದರು.

# ಮೇ.10 ರಂದು ವಿಜಯಪುರಕ್ಕೆ ಬಸವಜ್ಯೋತಿ ಯಾತ್ರೆ

ಉದಯರಶ್ಮಿ ನ್ಯೂಸ್



ವಿಜಯಪುರ: ಬೆಂಗಳೂ-ರಿನ ಬಸವಾನುಯಾಯಿ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರ್ ಬಸನಗೌಡ ಬಿ. ಪಾಟೀಲ(63) ಅಣ್ಣ ಬಸವಣ್ಣನವರ ತತ್ವಗಳ ಪ್ರಸಾರಕ್ಕಾಗಿ ಕಳೆದ 12 ವರ್ಷಗಳಿಂದ ಬಸವಜ್ಯೋತಿ ಯಾತ್ರೆ ನಡೆಸುತ್ತಿದ್ದು, ಈಗ ಮತ್ತೆ ಬಸವನ ಬಾಗೇವಾಡಿಯಿಂದ ವಿಜಯಪುರವರೆಗೆ ಓಡಿಕೊಂಡು ಬಸವಜ್ಯೋತಿ ತರಲಿದ್ದಾರೆ.

ವಿಜಯಪುರ ಜಿಲ್ಲೆ ಹಂದಿಗನೂರ ಗ್ರಾಮದವರಾಗಿರುವ ಬಸನಗೌಡ ಬಿ. ಪಾಟೀಲ ಮೇ 9 ರಂದು ಗುರುವಾರ ಮಧ್ಯರಾತ್ರಿ 12 ಗಂಟೆಗೆ ಅಣ್ಣ ಬಸವಣ್ಣನವರ ಜನ್ಮಭೂಮಿ ಬಸವನ ಬಾಗೇವಾಡಿಯಿಂದ ಹೊರಡಲಿರುವ ಇವರು, ಶುಕ್ರವಾರ ಬೆಳಿಗ್ಗೆ 7 ಗಂಟೆಗೆ ವಿಜಯಪುರ ನಗರದಲ್ಲಿರುವ ಬಸವೇಶ್ವರ ಸರ್ಕಲ್ ತಲುಪಲಿದ್ದಾರೆ. ಬಸನಗೌಡ ಬಿ. ಪಾಟೀಲ ಜೊತೆಗೆ ಈ ಬಾರಿ ಮ್ಯಾರಾಥಾನ್ ನಲ್ಲಿ ಹೆಸರು ಮಾಡಿರುವ ಅಲ್ಟ್ರಾ ರನ್ನರ್ ಜಗದೀಶ ದಮಾನಿಯಾ(63), ಡಾ. ಚಂದ್ರಶೇಖರ ಚಿಮಕೋಡೆ, ಮಲ್ಲಿಕಾರ್ಜುನ ಅವಂತಿ ಹಾಗೂ ಡಾ. ಅಭಿನಂದ ಬೆಡಗೆ ಕೂಡ ಪಾಲ್ಗೋಳ್ಳುತ್ತಿದ್ದಾರೆ. ಇವರು ಮಸ್ಸೂರಿಯಿಂದ ಯಮನೌತ್ರಿವರೆಗೆ ಕಳೆದ ಆರು ವರ್ಷಗಳಿಂದ ಪಾಲ್ಗೋಳ್ಳುತ್ತಿದ್ದಾರೆ. ಅಲ್ಲದೇ, ಬೆಂಗಳೂರಿನಿಂದ ಚೆನ್ನೈವರೆಗೆ 340 ಕಿ. ಮೀ. ನ್ನು ಏಳು ದಿನಗಳಲ್ಲಿ ಓಡುವ ಮೂಲಕ ಗಮನಾರ್ಹ ಸಾಧನೆ ಮಾಡಿದ್ದಾರೆ. ಅಷ್ಟೇ ಅಲ್ಲ, ಬೆಳಗಾವಿ ಮೂಲದ ಮತ್ತು ಈಗ ಬೆಂಗಳೂರಿನ ಎಂಜಿನಿಯರ್ ಇನ್ ಇನಫಿನ್ಯೂಯಾನ್ ಟೆಕ್ನಾಲಜೀಸ್ ಪ್ರೈವೆಟ್ ಲಿಮಿಟೆಡ್ ಪ್ರಿನ್ಸಿಪಲ್ ಆಗಿರುವ ಪ್ರಸಾದ ಶ್ರೀಂಗೇರಿ(42) ಸೇರಿದಂತೆ ಒಟ್ಟು ಐದು ಜನರು ತಂಡ ಇದರಲ್ಲಿ ಪಾಲ್ಗೊಳ್ಳುತ್ತಿದೆ.

ಅಷ್ಟೇ ಅಲ್ಲ, ವಿಜಯಪುರದ ಸೈಕ್ಲಿಂಗ್ ಗ್ರುಪ್ ನ ಸದಸ್ಯರಾದ ಸಂಕೇತ ಬಗಲಿ, ಬೆಂಗಳೂರಿನ ರಘು ಸಾಲೋಟಗಿ, ಡಾ. ರಾಜು ಯಲಗೊಂಡ, ಡಾ. ಭೀಮನಗೌಡ ಬಿರಾದಾರ ಕೂಡ ಈ ಬಸವಜ್ಯೋತಿ ಯಾತ್ರೆಯಲ್ಲಿ ಪಾಲ್ಗೋಳ್ಳುತ್ತಿದ್ದು, ಒಟ್ಟು 46 ಕಿ. ಮೀ. ಓಡಲಿದ್ದಾರೆ. ಇದರಲ್ಲಿ ವಿಜಯಪುರ ನಗರ ಮತ್ತು ಸುತ್ತಲಿನ ಗ್ರಾಮಸ್ಥರು ಪಾಲ್ಗೋಳ್ಳಬಹುದಾಗಿದ್ದು, ಈ ಆಧ್ಯಾತ್ಮಿಕ ಓಟದಲ್ಲಿ ಪಾಲ್ಗೋಂಡು ಬಸವಾದಿ ಶರಣರ ವಚನಗಳ ಕುರಿತು ಜಾಗೃತಿ ಮೂಡಿಸಲು ಪ್ರೋತ್ಸಾಹಿಸಬೇಕು. ವಿಜಯಪುರ ಸೈಕ್ಲಿಂಗ್ ಗ್ರುಪ್ ವತಿಯಿಂದ ಮೇ 10 ರಂದು ಬೆಳಿಗ್ಗೆ ನಗರದ ಹೊರವಲಯದ ಶಿವಗಿರಿ ಬಳಿ ಬಸವಜ್ಯೋತಿ ಯಾತ್ರೆಯಲ್ಲಿ ಪಾಲ್ಗೊಂಡಿರುವ ಓಟಗಾರರನ್ನು ಸ್ವಾಗತಿಸಿ ಬಸವೇಶ್ವರ ವೃತ್ತದವರೆಗೆ ಕರೆತರಲಾಗುವುದು ಎಂದು ವಿಜಯಪುರ ಸೈಕ್ಲಿಂಗ್ ಗ್ರುಪ್ ಸಂಘಟನಾ ಕಾರ್ಯದರ್ಶಿ ಸೋಮಶೇಖರ ಮಾಧ್ಯಮ ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

# ಇವಿಎಂ ಮಶೀನು ವಿಜಯಪುರಕ್ಕೆ ರವಾನೆ

ಉದಯರಶ್ಮಿ ನ್ಯೂಸ್



ಇಂಡಿ: ಮೇ.7 ರಂದು ಇಂಡಿ ಮತಕ್ಷೇತ್ರದಲ್ಲಿ ನಡೆದ ಲೋಕಸಭಾ ಚುನಾವಣೆಯ ಮತ ಯಂತ್ರಗಳನ್ನು ರಾತ್ರಿ 3 ಗಂಟೆಗೆ ವಿಜಯಪುರಕ್ಕೆ ರವಾನಿಸಲಾಗಿದೆ ಎಂದು ಸಹಾಯಕ ಚುನಾವಣೆ ಅಧಿಕಾರಿ ಮತ್ತು ಕಂದಾಯ ಉಪವಿಬಾಗಾಧಿಕಾರಿ ಅಬೀದ್ ಗದ್ಯಾಳ ತಿಳಿಸಿದ್ದಾರೆ.

268 ಮತ ಯಂತ್ರಗಳನ್ನು ಪೋಲಿಸ ಬಂದೋಬಸ್ತಿನಲ್ಲಿ ಇಂಡಿಯ ಆದರ್ಶ ಪ್ರೌಢಶಾಲೆಯಿಂದ ವಿಜಯಪುರದ ಸೈನಿಕ ಶಾಲೆಗೆ ಕಳುಹಿಸಲಾಗಿದೆ.

ಈ ವೇಳೆಯಲ್ಲಿ ತಹಸೀಲ್ದಾರ ಮಂಜುಳಾ ನಾಯಕ, ಡಿ.ಎಸ್.ಪಿ ಎಚ್.ಎಸ್.ಜಗದೀಶ, ಪಿಎಸ್ಐ ಮಂಜುನಾಥ ಹುಲಕುಂದ, ಪಿಡಿಒ ಬಸವರಾಜ ಬಬಲಾದ, ಬಸವರಾಜ ರಾಹೂರ,ಆರ್.ಬಿ.ಮೂಗಿ ಮತ್ತಿತರಿದ್ದರು.

# ಸಿಂದಗಿಯಲ್ಲಿ ಸಂಸ್ಕಾರ ಶಿಬಿರದ ಸಮಾರೋಪ

ಉದಯರಶ್ಮಿ ನ್ಯೂಸ್




ಸಿಂದಗಿ: ಎಲ್ಲ ಮಕ್ಕಳು ಇಂತಹ ಬೇಸಿಗೆ ಕಾಲದಲ್ಲಿ ತಂದೆ ತಾಯಿ, ಮನೆಗಳನ್ನು ಬಿಟ್ಟು ಇಷ್ಟೆಲ್ಲಾ ಮಂತ್ರಗಳನ್ನು ಒಂದು ತಿಂಗಳು ಕಲಿಯುತ್ತಿರುವುದು ಸಂತಸ ತಂದಿದೆ ಎಂದು ಶ್ರೀಶೈಲ ಪೀಠದ ಜಗದ್ಗುರು ಡಾ.ಚೆನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗತ್ಪಾಂದಗಳ ಹೇಳಿದರು.

ಪಟ್ಟಣದ ಸಾರಂಗಮಠದಲ್ಲಿ ಒಂದು ತಿಂಗಳ ಕಾಲ ಜರುಗಿದ ಸಂಸ್ಕಾರ ಶಿಬಿರದಲ್ಲಿ ಭಾಗವಹಿಸಿ ಮಕ್ಕಳಿಗೆ ಶ್ರೀಶೈಲ ಪೀಠದ ಜಗದ್ಗುರುಗಳು ಆಶೀರ್ವದಿಸಿ ಮಾತನಾಡಿದ ಅವರು, ಶೋಡಶೋಪಚಾರ ಮಂತ್ರ ಮತ್ತು ರುಧ್ರ ನಾಮಕ ಅಧ್ಯಾಯಗಳನ್ನು ಶುದ್ಧವಾಗಿ ಸ್ಪಷ್ಟವಾಗಿ ಹೇಳುವುದನ್ನು ಕೇಳಿ ಸಂತೋಷ ಪಟ್ಟರು. ಇನ್ನೂ 15ದಿನಗಳ ಸಮಯದಲ್ಲಿ ಚಮಕ್ ಅಧ್ಯಾಯ, ಪುರುಷಸೂಕ್ತ, ಅಂತ್ಯ ಸಂಸ್ಕಾರದ ವಿಧಿ ವಿಧಾನಕ್ಕೆ ಬೇಕಾಗುವ ಮಂತ್ರ, ವರದಾಶಂಕರ ವ್ರತದ ಪೂಜಾ ಕ್ರಮ ಹಾಗೂ ಊಟದ ಮಂತ್ರ ಸೇರಿದಂತೆ ಅನೇಕ ವಿಚಾರಗಳನ್ನು ಮಕ್ಕಳಿಗೆ ಕಲಿಸಿ ಎಂದು ಸಲಹೆ ನೀಡಿದರು.

ಈ ವೇಳೆ ಜಗದ್ಗುರುಗಳಿಗೆ ಮಕ್ಕಳು ಗುರು ಕಾಣಿಕೆ ಸಮರ್ಪಿಸಿ ಆಶೀರ್ವಾದ ಪಡದುಕೊಂಡರು. ಬಳಿಕ ಶಿಬಿರದ ಮಕ್ಕಳಿಗೆ ಮೃತ್ಯುಂ-ಜಯ ಕತ್ತಿ ಅವರ ಮಗಳು ಪೂರ್ವಿ ಕತ್ತಿ ಸ್ವಯಂ ರಕ್ಷಣೆಗಾಗಿ ಕರಾಟೆ ವಿದ್ಯೆ ಹೇಳಿಕೊಟ್ಟರು.

ಇದೇ ಸಂದರ್ಭದಲ್ಲಿ ಸಾರಂಗಮಠದ ಡಾ. ಪ್ರಭು ಸಾರಂಗದೇವ ಶಿವಾಚಾರ್ಯರು, ಜಮಖಂಡಿಯ ಕೊಣ್ಣೂರು ಹೊರಗಿನಮಠದ ಡಾ.ವಿಶ್ವಪ್ರಭುದೇವ ಶಿವಾಚಾರ್ಯರು, ಯಂಕಂಚಿ ಶ್ರೀಮಠದ ಅಭಿನವ ರುದ್ರಮುನಿ ಶಿವಾಚಾರ್ಯರು, ಜೈನಾಪುರ ಶ್ರೀಗಳು, ಕರಭಂಟನಾಳದ ಶಿವಯ್ಯ ಸ್ವಾಮೀಜಿ, ಪ್ರಶಾಂತ ಹಿರೇಮಠ ಸೇರಿದಂತೆ ಮಕ್ಕಳು ಉಪಸ್ಥಿತರಿದ್ದರು.

# ಯಾಳವಾರ: ಜಾತ್ರಾ ಮಹೋತ್ಸವ

ಉದಯರಶ್ಮಿ ನ್ಯೂಸ್

ದೇವರಹಿಪ್ಪರಗಿ: ಯಾಳವಾರ ಗ್ರಾಮದ ಗುರು ಮಹಾಂತ ಶಿವಾಚಾರ್ಯರ ಜಾತ್ರಾ ಹಾಗೂ ನಮ್ಮೂರ ಹೆಮ್ಮೆ ನಮ್ಮೂರ ಮಹೋತ್ಸವ ಗುರುಮಠದಲ್ಲಿ ಜರುಗಲಿದೆ.

ದಿ:11 ಶನಿವಾರದಂದು ಸಾಯಂಕಾಲ 6 ಗಂಟೆಗೆ ಮಹಾಂತೇಶ್ವರ ಗದ್ದುಗೆಗೆ ಕಳಸಾರೋಹಣ ಹಾಗೂ ಆಧ್ಯಾತ್ಮ ಪ್ರವಚನ ಮಂಗಲ ನೆರವೇರಲಿದೆ. ಸಂಜೆ 7 ಗಂಟೆಗೆ ಅನುದಿನ ಅನುಸರಿಸು ಸಂಸ್ಥೆ ವತಿಯಿಂದ ನಮ್ಮೂರ ಉತ್ಸವ ನಮ್ಮ ಹೆಮ್ಮೆ ರೈತೋತ್ಸವ ಮತ್ತು 201 ಎತ್ತಿನ ಬಂಡಿ ಮೆರವಣಿಗೆ ಮಹಾಲಿಂಗೇಶ್ವರ ಕ್ರೀಡಾಂಗಣದಲ್ಲಿ ಜರುಗಲಿದೆ.

ದಿ:12 ಭಾನುವಾರರದಂದು ಬೆಳಿಗ್ಗೆ ಬ್ರಾಹ್ಮಿ ಮುಹರ್ತದಲ್ಲಿ ಗುರುಗಳ ಗದ್ದುಗೆ ಮಹಾರುದ್ರಾಭಿಷೇಕ ಮಹಾಮಂಗಳಾರತಿ, 9 ಗಂಟೆಗೆ ಜಗದ್ಗುರು ದಾರುಕಾಚರ್ಯರ ಅಡ್ಡಪಲ್ಲಕ್ಕಿ ಉತ್ಸವ ಮಧ್ಯಾನ್ಹ ಮಹಾಪ್ರಸಾದ ಸಾಯಂಕಾಲ ಹೆಡಗಾಪೂರ ಶಿವಲಿಂಗೇಶ್ವರ ಸಂಸ್ಥಾನಮಠ ಹಾಗೂ ಗುರುಮಾಂತೇಶ್ವರ ಗುರುಮಠದ ಷ.ಬ್ರ ದಾರುಕಲಿಂಗ ಶಿವಾಚರ್ಯರ ಸಾನಿಧ್ಯದಲ್ಲಿ ಶ್ರೀಗುರುಮಹಾಂತೇಶ್ವರ ಮಹಾರಥೋತ್ಸವ ಜರುಗಲಿದೆ. ಈ ಎಲ್ಲ ಕಾರ್ಯಕ್ರಮಗಳಲ್ಲಿ ಯಾಳವಾರ, ನಾಗರಾಳ, ಕಡಕೋಳ, ಭೈರವಾಡಗಿ, ಕಾಮನಕೇರಿ ಗ್ರಾಮಗಳ ಸದ್ಭಕ್ತರು ಪಾಲ್ಗೊಳ್ಳಲಿದ್ದಾರೆ ಎಂದು ಶ್ರೀಮಠದ ಪ್ರಕಟಣೆ ತಿಳಿಸಿದೆ.

# ಕೊಂಡಗೂಳಿ ವೀರಘಂಟಿ ಮಡಿವಾಳೇಶ್ವರ ಜಾತ್ರಾ ಮಹೋತ್ಸವ

ಉದಯರಶ್ಮಿ ನ್ಯೂಸ್

ದೇವರಹಿಪ್ಪರಗಿ: ತಾಲ್ಲೂಕಿನ ಕೊಂಡಗೂಳಿ ಗ್ರಾಮದಲ್ಲಿ ಬಸವ ಜಯಂತಿ ಅಂಗವಾಗಿ ಶ್ರೀಗುರು ವೀರಘಂಟಿ ಮಡಿವಾಳೇಶ್ವರ ಜಾತ್ರಾ ಮಹೋತ್ಸವ ಜರುಗಲಿದೆ.

ದಿ:10 ರಂದು ಶುಕ್ರವಾರ ಬೆಳಿಗ್ಗೆ ಬಸವ ಜಯಂತಿ ಅಂಗವಾಗಿ ವೀರಘಂಟಿ ಮಡಿವಾಳೇಶ್ವರ ಕರ್ತೃ ಗದ್ದುಗೆಗೆ ರುದ್ರಾಭಿಷೇಕ, 10 ಗಂಟೆಗೆ ಬಸವೇಶ್ವರ ಭಾವಚಿತ್ರದ ಮೆರವಣಿಗೆ ಹಾಗೂ ಬಸವೇಶ್ವರ ವೃತ್ತದ ಪ್ರತಿಮೆಗೆ ಪೂಜೆ, ರಾತ್ರಿ 7 ಗಂಟೆಗೆ ಬಸವೇಶ್ವರರ ತೊಟ್ಟಿಲು ಕಾರ್ಯಕ್ರಮ ಹಾಗೂ ಧಾರ್ಮಿಕ ಪ್ರವಚನ ಮುಕ್ತಾಯ ಸಮಾರಂಭ ಜರುಗಲಿದೆ.

ದಿ:11 ರಂದು ಶನಿವಾರ ಬೆಳಿಗ್ಗೆ ವೀರಘಂಟಿ ಮಡಿವಾಳೇಶ್ವರರ ಉತ್ಸವ ಮೂರ್ತಿಯೊಂದಿಗೆ ಪಲ್ಲಕ್ಕಿ ಉತ್ಸವ, ನಂದಿಕೋಲ ಮೆರವಣಿಗೆ, ಸುಮಂಗಲೆಯರ ಕುಂಭ, ಕಳಸಕನ್ನಡಿಯೊಂದಿಗೆ ಸಕಲ ವಾದ್ಯವೈಭವಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಭವ್ಯ ಮೆರವಣಿಗೆ ನಡೆಯಲಿದೆ. ನಂತರ ಮಹಾಪ್ರಸಾದ ವಿತರಣೆಯಾಗಲಿದೆ. ಸಾಯಂಕಾಲ 5 ಗಂಟೆಗೆ ಜಂಗಿ ನಿಕಾಲಿ ಕುಸ್ತಿಗಳು ಹಾಗೂ ರಾತ್ರಿ 10.30 ಗಂಟೆಗೆ ಸಿದ್ದು ಮೇಲಿನಮನಿ ಅವರ ದೀಪಕ ಮೆಲೋಡಿಸ್‌ದಿಂದ ಸಂಗೀತ ಸಂಜೆ ಜರುಗಲಿದೆ.

ಮಹೋತ್ಸವದಲ್ಲಿ ಬೀದರ ಚಳಕಾಪೂರ ಮಠದ ಶಂಕರಾನಂದ ಸ್ವಾಮೀಜಿ, ಜಾಲವಾದ ಗ್ರಾಮದ ಮಹಾಂತಲಿಂಗ ಶ್ರೀ, ನಂದವಾಡಗಿಯ ಚನ್ನಬಸವ ಶ್ರೀ, ಯಂಕಂಚಿ ಹಿರೇಮಠದ ರುದ್ರಮುನಿಶ್ರೀ, ಬೋರಗಿ-ಪುರದಾಳದ ಮಹಾಲಿಂಗೇಶ್ವರ ಸ್ವಾಮೀಜಿ, ತಾಳಿಕೋಟೆ ಖಾಸ್ಗತೇಶ್ವರ ಮಠದ ಸಿದ್ಧಲಿಂಗ ದೇವರು, ಕೋರವಾರ ಚೌಕಿಮಠದ ಮುರುಘೇಂದ್ರ ಸ್ವಾಮೀಜಿ, ಜಮ್ಮಲದಿನ್ನಿಯ ಸಿದ್ಧರಾಮ ಸ್ವಾಮೀಜಿ, ಕಡಕೋಳದ ಮಹಾಲಿಂಗ ಸ್ವಾಮೀಜಿ ಭಾಗವಹಿಸಲಿದ್ದಾರೆ ಎಂದು ಜಾತ್ರಾಕಮೀಟಿ ಪ್ರಕಟಣೆ ಮೂಲಕ ತಿಳಿಸಿದೆ.

# ಅಸ್ಕಿ, ಬೆಕಿನಾಳ, ಬೂದಿಹಾಳ ಪಿ.ಟಿ, ಹುಣಶ್ಯಾಳ ಕೆರೆ ತುಂಬಿಸಲು ಆಗ್ರಹ

ಉದಯರಶ್ಮಿ ನ್ಯೂಸ್



ತಾಳಿಕೋಟಿ : ಅಸ್ಕಿ, ಬೂದಿಹಾಳ ಪಿ.ಟಿ, ಬೆಕಿನಾಳ ಹಾಗೂ ಹುಣಶ್ಯಾಳ ಗ್ರಾಮದ ಕೆರೆಯ ವ್ಯಾಪ್ತಿಯ ಜಮೀನನ್ನು ಇಲಾಖೆಯ ಸುಪರ್ದಿಗೆ ತೆಗೆದುಕೊಂಡು ಅದನ್ನು ಅಭಿವೃದ್ಧಿಪಡಿಸಿ ಕೆರೆ ನೀರು ತುಂಬಿಸಬೇಕು ಮತ್ತು ರೈತರ ಉತಾರೆಯಲ್ಲಿ ಜಮೀನನ್ನು ಕಡಿಮೆ ಮಾಡುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ತಾಳಿಕೋಟಿ ತಾಲೂಕಾ ತಹಶಿಲ್ದಾರರಿಗೆ ಮನವಿ ಸಲ್ಲಿಸಿ ಆಗ್ರಹಿಸಿದರು.


ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಅವರು ಮನವಿ ಸಲ್ಲಿಸಿ ಮಾತನಾಡುತ್ತಾ, ವಿಜಯಪುರ ಜಿಲ್ಲೆಯ ತಾಳಿಕೋಟಿ ತಾಲೂಕಿನ ಆಸ್ಕಿ, ಬೂದಿಹಾಳ.ಪಿ.ಟಿ, ಹುಣಶ್ಯಾಳ ಹಾಗೂ ಬೆಕಿನಾಳ ಗ್ರಾಮದಲ್ಲಿಯ ಕೆರೆಗಳು ಇಂದು ಅಕ್ಕಪಕ್ಕದ ರೈತರು ಅತಿಕ್ರಮಣ ಮಾಡಿಕೊಂಡು ಸಾರ್ವಜನಿಕರಿಗೆ ಹಾಗೂ ಜನಜಾನುವಾರುಗಳಿಗೆ ಅಲ್ಲಿ ನೀರು ಕುಡಿಯಲು ಹಾಗೂ ಬಳಸಲು ಬಿಡುತ್ತಿಲ್ಲ, ಕೇಳಿದರೆ ಇದು ನಮ್ಮ ಜಾಗ ನಮ್ಮ ಹೆಸರಲ್ಲಿ ಉತಾರೆಗಳಿವೆ ಎಂದು ದೊಡ್ಡ ಧ್ವನಿಯಲ್ಲಿ ಅಂಜಿಸುತ್ತಿದ್ದಾರೆ.

ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಸ್ಥಳ ವಿಕ್ಷಣೆ ಮಾಡಿ ಕೆರೆಯ ಒಟ್ಟು ಅಳತೆ ಮಾಡಿ ಅಕ್ರಮವಾಗಿ ಅತಿಕ್ರಮಣ ಮಾಡಿ ಸಾಗುವಳಿ ಮಾಡುತ್ತಿರುವವರನ್ನು ಅಲ್ಲಿಂದ ಖಾಲಿ ಮಾಡಿಸಿ, ಅಂತವರ ಮೇಲೆ ಕಾನೂನು ಕ್ರಮ ಕೈಕೊಳ್ಳಬೇಕು, ಸಂಪೂರ್ಣ ಕೆರೆಯನ್ನು ಅಭಿವೃದ್ಧಿ ಪಡಿಸಬೇಕು, ಇಗಾಗಲೇ ಬರಗಾಲದಿಂದ ತತ್ತ-ರಿಸಿರುವ ರೈತರಿಗೆ ಕೆರೆಯಿಂದ ಸಾಕಷ್ಟು ಅನುಕೂಲವಾಗಲಿದೆ, ಅಕ್ಕಪಕ್ಕದ ಬಾವಿ, ಕೊಳವೆ ಭಾವಿಯಲ್ಲಿ ನೀರು ಹೆಚ್ಚಾಗಿ ಕೃಷಿ ಮಾಡಲು ಮತ್ತು ಕುಡಿಯಲು ನೀರಿನ ಬಹು ದೊಡ್ಡ ಸಹಾಯವಾಗುವುದು. ಆದ್ದರಿಂದ ಈ ಎಲ್ಲಾ ಕೆರೆಯನ್ನು ತುಂಬಿಸಬೇಕು. ಎಂದರು.

ರೈತ ಸಂಘದ ತಾಲೂಕಾ ಅಧ್ಯಕ್ಷರಾದ ಶ್ರೀಶೈಲ ವಾಲಿಕಾರ ಮಾತನಾಡುತ್ತಾ ಬೆಕಿನಾಳ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಸಾಕಷ್ಟು ಇರುವುದರಿಂದ ಈಗಾಗಲೇ ಬೆಕಿನಾಳ ಗ್ರಾಮದ ಸರಕಾರಿ ಜಮೀನಿನಲ್ಲಿ ಶರಣಪ್ಪ ಕಟ್ಟಿಮನಿ ಇವರ ಬಾವಿಯಲ್ಲಿ ಸಾಕಷ್ಟು ನೀರು ಇದ್ದು, ಅಲ್ಲಿಂದ ಪೈಪಲೈನ ಮೂಲಕ ನೀರನ್ನು ಮನೆ ಮನೆಗೆ ಸರಬರಾಜು ಮಾಡಿದರೆ ನೀರಿನ ಸಮಸ್ಯೆ ಬಗೆಹರೆಯಲಿದೆ ಎಂದರು.

ಬಿಸಿಗಿಂತ ತಾಪಮಾನದಿಂದ ಸಾಕಷ್ಟ ಸಮಸ್ಯೆ ಅನುಭವಿಸುವಂತಾಗಿದೆ, ಈ ವಿಷಯವನ್ನು ಅತೀ ಅವಶ್ಯಕ ಎಂದು ತಿಳಿದು ಶೀಘ್ರದಲ್ಲಿ ಸಂಪೂರ್ಣ ಕೆರೆ ಜಾಗವನ್ನು ಅಭಿವೃದ್ಧಿ ಪಡಿಸಿ ಕೆರೆ ತುಂಬುವ ಯೋಜನೆಯಡಿ ತುಂಬಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ಆಗ್ರಹಿಸುತ್ತಾ ಇದ್ದೇವೆ, ಒಂದು ವೇಳೆ ವಿಳಂಭವಾದರೆ ಹೋರಾಟ ಅನಿವಾರ್ಯವಾಗಲಿದೆ ಎಂದು ಎಚ್ಚರಿಸಿದರು.

ಈ ವೇಳೆ ಕಲಕೇರಿ ಹೊಬಳಿ ಅಧ್ಯಕ್ಷರಾದ ಮಹಿಬೂಬ ಬಾಷಾ ಮನಗೂಳಿ, ಬೆಕಿನಾಳ ಅಧ್ಯಕ್ಷ ದೇವಿಂದ್ರಪ್ಪಗೌಡ ಪಾಟೀಲ ಸೇ-ರಿದಂತೆ ಇತರರು ಇದ್ದರು.



# ಸಮಾಜ ಸೇವಕ ಆಲೂರ ಗೆ ಮಹಾಂತೇಶ್ವರ ಶ್ರೀ ಪ್ರಶಸ್ತಿ ಪ್ರದಾನ

ಉದಯರಶ್ಮಿ ನ್ಯೂಸ್



ವಿಜಯಪುರ: ಬಸವನ ಬಾಗೇವಾಡಿ ತಾಲೂಕಿನ ಮನಗೂಳಿಯ ಪಟ್ಟಕಂಥಿ ಹಿರೇಮಠದ ಬಾಲತಪಸ್ವಿ ಮಹಾಂತೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳ 75ನೇ ಯಾತ್ರಾ ಮಹೋತ್ಸವ, ಸಂಗನಬಸವ ಶಿವಾಚಾರ್ಯ ಮಹಾಸ್ವಾಮಿಗಳ 23ನೇ ಸಂಸ್ಮರಣೋತ್ಸವ ಹಾಗೂ ಗುರು ಮಹಾಂತೇಶ್ವರ ಮಹಾಂತೇಶ್ವರ ಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಥಮ ದರ್ಜೆ ಗುತ್ತಿಗೆದಾರರು ಆದ ಸಮಾಜ ಸೇವಕ ಎಸ್.ಎಸ್.ಆಲೂರ ದಂಪತಿಗಳಿಗೆ ಮಹಾಂತೇಶ್ವರ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಏ.8ರ ಬುಧವಾರದಂದು ಮನಗೂಳಿಯಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಇವರ ಸೇವೆಯನ್ನು ಪರಿಗಣಿಸಿ ಮಹಾಂತೇಶ್ವರ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಡೋಣೂರು-ಕೊಟ್ಟೂರು ಮಠದ ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಸಾನಿಧ್ಯ ವಹಿಸಿದ್ದರು. ಕೆರೂರ-ಕೊಣ್ಣೂರ ಮಠದ ಡಾ.ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು ಅಧ್ಯಕ್ಷತೆ ವಹಿಸಿದ್ದರು. ಹುಕ್ಕೇರಿಯ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು, ಅಮರೇಶ್ವರಮಠ ಗುಳೇದಗುಡ್ಡದ, ಪ್ರಭುಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು, ಷ.ಬ್ರ.ಡಾ.ನೀಲಕಂಠ ಶಿವಾಚಾರ್ಯ ಮಹಾಸ್ವಾಮಿಗಳು, ಮನಗೂಳಿಯ ಶ್ರೀಮದ್ ವಿಭೂತಿಪುರ ವೀರಸಿಂಹಾಸನ ಸಂಸ್ಥಾನ ಮಠದ ಡಾ.ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಇಂಗಳೇಶ್ವರ-ವಡವಡಗಿಯ ಬೃಂಗೀಶ್ವರಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಸೋಮನಗೌಡ(ಅಪ್ಪುಗೌಡ) ಪಾಟೀಲ, ಚಂದ್ರಶೇಖರ ಎಸ್.ಪಾಟೀಲ, ಎಸ್.ಜಿ.ಹಾವಣ್ಣವರ, ಎಸ್.ಆಯ್.ರೇವೂರಕರ ಸೇರಿದಂತೆ ಇತರರು ಉಪಸ್ಥಿತರಿದ್ದರು.

# 171-173 ಮತಗಟ್ಟೆಯ ಆವರಣದಲ್ಲಿಯೇ ಜನ ಜಂಗುಳಿ

ಉದಯರಶ್ಮಿ ನ್ಯೂಸ್



ಸಿಂದಗಿ: 2024ರ ಲೋಕಸಭಾ ಚುನಾವಣೆಯ ಹಿನ್ನಲೆಯಲ್ಲಿ ಸಿಂದಗಿ ವಿಧಾನಸಭಾ ಮತಕ್ಷೇತ್ರ-33ರಲ್ಲಿ ಶಾಂತಿಯುತ ಮತದಾನವಾಗಿದೆ.

ಬಿಸಿಲಿನ ಬರದಲ್ಲಿ ಬೆಳಿಗ್ಗೆ ಬೇಗ ಮತದಾನ ಮಾಡಿದರು. ಮಧ್ಯಾಹ್ನ 2 ಗಂಟೆಯಿಂದ ಸಾಯಂಕಾಲದವರೆಗೆ ಕ್ಷೇತ್ರದಲ್ಲಿ ಬಿಸಿಲಿನ ಬೇಗಗೆ ಮತದಾನ ನಿರಸ ಪ್ರತಿಕ್ರಿಯೆ ಕಂಡು ಬಂದಿತ್ತು. ಆದರೆ ಬಿಸಿಲು ಇಳಿಯುವ ಸಮಯದಲ್ಲಿ ಮತದಾರರು ತೀವ್ರವಾಗಿ ಕುಟುಂಬ ಸಮೇತವಾಗಿ ಅವರವರ ಮತಗಟ್ಟೆಗಳಿಗೆ ತೆರಳಿ ಮತದಾನ ಮಾಡಿದ್ದು ಕಂಡು ಬಂದಿತು. ಯಾವುದೇ ರಿತೀಯ ಅಹಿತಕರ ಘಟನೆಗಳು ಕಂಡು ಬಂದಿಲ್ಲ. ಮತಗಟ್ಟೆ ಸಂಖ್ಯೆ 171, 172, 173 ಬೂತ್‌ನ ಆವರಣದಲ್ಲಿಯೇ ಆಗಮಿಸಿ ಚಿಟಿ ನೀಡುವ ದೃಶ್ಯ ಕಂಡು ಬಂದಿತು. ಆದರೆ ಅಧಿಕಾರಿಗಳು ಕಂಡು ಕಾಣದಂತೆ ಕುಳತಿದ್ದಾರೆ.

ಒಟ್ಟು 2,40,444 ಮತಗಳಿದ್ದು, ಅದರಲ್ಲಿ ಪುರುಷರು-1,23,313, ಮಹಿಳೆಯರು-1,17,100, 1381 ವಯಸ್ಕರು ಮತ್ತು ಇತರೆ 29 ಮತಗಳಿದ್ದವು.

ಒಟ್ಟು ಕ್ಷೇತ್ರದಲ್ಲಿ 268 ಮತಗಟ್ಟಗಳಿದ್ದು, 137 ಸೂಕ್ಷ [illegible] ಮತಗಟ್ಟೆಗಳಿದ್ದವು. ಅದರಲ್ಲಿ ಸಿಂದಗಿ ಕಾಳಿಕಾ ನಗರದ ಸರಕಾರಿ ಪ್ರಾಥಮಿಕ ಶಾಲೆ ನಂ6, ಬಸವ ನಗರದ ಸರಕಾರಿ ಹೆಣ್ಣು ಮಕ್ಕಳ ಶಾಲೆ, ವಿದ್ಯಾ ನಗರದ ಸರಕಾರಿ ಗಂಡು ಮಕ್ಕಳ ಶಾಲೆ, ಸಿಂದಗಿ ಸರಕಾರಿ ಗಂಡು ಮಕ್ಕಳ ಶಾಲೆ ಮತ್ತು ಆಲಮೇಲದ ಸರಕಾರಿ ಗಂಡು ಮಕ್ಕಳ ಶಾಲೆ ಸೇರಿದಂತೆ ಒಟ್ಟು 5 ಸಖೀ ಬೂತಗಳು ನಿರ್ಮಾಣವಾಗಿದ್ದವು

# ಆಹಾ! ಈ ಬದುಕಿನ ಸವಿ ಸ್ವರ್ಗಕ್ಕೂ ಮಿಗಿಲು!

ಜಯ್ ನುಡಿ



● ಜಯಶ್ರೀ.ಜೆ.ಅಬ್ಬಿಗೇರಿ
ಇಂಗ್ಲೀಷ್ ಉಪನ್ಯಾಸಕರು, ಬೆಳಗಾವಿ
9449234142

'ತಿರುಕನ ಕನಸು' ಕವಿತೆ ಕೇಳದವರು ತುಂಬ ಕಡಿಮೆ. ನನಸಾಗದ ಕನಸಿನ ಕುರಿತು ಮಾತನಾಡುವಾಗೊಮ್ಮೆ ನಿನ್ನದು ತಿರುಕನ ಕನಸಾಯಿತೆಂದು ಉದ್ಗರಿಸುವುದುಂಟು.ಆ ಕವಿತೆ ಎಷ್ಟು ಸಲ ಕೇಳಿದರೂ ಮತ್ತೆ ಮತ್ತೆ ಕೇಳಬೇಕೆನ್ನುವಂತಿದೆ ಅನ್ನುವವರೂ ಉಂಟು. ಆ ಕವಿತೆಯಲ್ಲಿ ಏನಾಗುತ್ತದೆ ಅಂತ ನೋಡೋಣ ಬನ್ನಿ. ಮುಪ್ಪಿನ ಷಡಕ್ಷರಿ ಕವಿಯ 'ತಿರುಕನ ಕನಸು' ಕವಿತೆಯಲ್ಲಿ ಭಿಕ್ಷುಕನೊಬ್ಬನು ಮುರುಕು ಛತ್ರದಲ್ಲಿ ಮಲಗಿರುವಾಗ ಕನಸೊಂದನ್ನು ಕಾಣುತ್ತಾನೆ. ಕನಸಿನಲ್ಲಿ ಆಕಸ್ಮಿಕವಾಗಿ ಅರಸನಾಗುತ್ತಾನೆ. ಸಕಲ ಭೋಗ ಭಾಗ್ಯಗಳೊಂದಿಗೆ ರಾಜ್ಯವನ್ನಾಳುತ್ತಾನೆ. ಒಮ್ಮೆ ಸೇವಕರು ಅವಿಧೇಯರಾಗಿ ನಡೆದುಕೊಂಡರೆಂದು ಕಾಲಿನಿಂದ ಜಾಡಿಸಿ ಒದೆಯುತ್ತಾನೆ.







ಆಗ ಅವನ ಕಾಲ ಬಳಿ ಇದ್ದ ಮಡಿಕೆ ಉರುಳಿ ಒಡೆದು ಹೋಗುತ್ತದೆ. ತಿರುಪೆ ಎತ್ತಿ ತಂದಿದ್ದ ಹಿಟ್ಟೂ ಸಹ ಚೆಲ್ಲಿ ಹೋಗುತ್ತದೆ. ಕೊನೆಯಲ್ಲಿ ಅರಮನೆಗೆ ವೈರಿಗಳು ಮುತ್ತಿದಂತಾಗಿ ಎಚ್ಚರವಾಗುತ್ತದೆ. ತಾನು ಅದುವರೆಗೂ ಕಂಡದ್ದು ಕನಸು ಎಂದು ಅವನಿಗೆ ಅರ್ಥವಾಗುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ತಿರುಕನ ಕನಸು ಅಲ್ಲಿದ್ದ ವೈಭೋಗಗಳೆಲ್ಲವೂ ಸುಳ್ಳೇ ಆಗಿದ್ದರೂ ಕನಸಿನ ಪರಿಣಾಮವಾಗಿ ಮಡಿಕೆ ಒಡೆದದ್ದು, ಹಿಟ್ಟು ಚೆಲ್ಲಿ ಹೋಗಿದ್ದು ಸುಳ್ಳಲ್ಲ. ಕಂಡದ್ದು ಕನಸಾದರೂ ಅದರ ಪರಿಣಾಮ ಅನುಭವಿಸಬೇಕಾಯಿತು. ಆತನ ಪಾಲಿಗೆ ಅಮೂಲ್ಯವಾಗಿದ್ದ ಮಡಿಕೆ ಒಡೆದು ಹೋಯಿತು. ಅವತ್ತಿನ ಆಹಾರವಾದ ಹಿಟ್ಟೂ ನಷ್ಟವಾಯಿತು.



ನಮ್ಮ ಬದುಕಿನಲ್ಲೂ ಹೀಗೆ ಕನಸಿನಂತೆ ಘಟಿಸುವ ಸಂದರ್ಭಗಳು ಸನ್ನಿವೇಶಗಳು ಜೀವವನ್ನು ಜಗತ್ತಿಗೆ ಅಂಟಿಸಿ ಬಿಡುತ್ತವೆ.ಸುಖ ದುಃಖಗಳು ಕನಸಿನಂತೆ ಬರುತ್ತಿರುತ್ತವೆ. ಮಗ್ಗಲು ಮುಳ್ಳಿನ ಹಾಸಿಗೆಯಂತೆ ಚುಚ್ಚುತ್ತಲೇ ಇರುತ್ತವೆ. ಭಾವ ಬುದ್ಧಿಗಳು ಸಮನ್ವಯ ಸ್ಥಿತಿಯಲ್ಲಿದ್ದಾಗ ಮಾತ್ರ ಸಾಥ-ರ್ಕ ಜೀವನದ ಕನಸುಗಳನ್ನು ನನಸಾಗಿಸಲು ಸಾಧ್ಯ. ವಿವೇಕದ ಮಾತನ್ನು ಕಿವಿಗೆ ಹಾಕಿಕೊಳ್ಳದೆ ಭಾವಾತಿರೇಕಕ್ಕೆ ಕಿವಿಗೊಟ್ಟರೆ ಮನಸ್ಸು ಹುಚ್ಚೆದ್ದ ಮಂಗನಂತಾಗಿಬಿಡುತ್ತದೆ. ಇಂದ್ರಿಯಗಳು ಭೋಗಲಾಲಸೆಯಲ್ಲಿ ಮುಳುಗುತ್ತವೆ ಇದರಿಂದಾಗಿ ಆತ್ಮದ ಶಕ್ತಿ ಕುಂದುತ್ತದೆ.ಇಂದ್ರಿಯಗಳನ್ನು ನಿಯಂತ್ರಿಸಲಾಗದೆ ಅವುಗಳ ಗುಲಾಮನಾಗಿ ಬಿರುಗಾಳಿಗೆ ಸಿಕ್ಕ ಹಡಗಿನಂತೆ ಪರದಾಡಬೇಕಾಗುತ್ತದೆ. ಜೀವನದಲ್ಲಿನ ನೋವಾಗಲಿ ನಲಿವಾಗಲಿ ಶಾಶ್ವತವಲ್ಲ. ಏಕೆಂದರೆ ಜೀವನವೇ ನಶ್ವರ. ಹಿಂದೆ ಹುಟ್ಟು ಇಂದು ಬದುಕು ಮುಂದೆ ಸಾವು. ಜೀವನ ನೆರಳು ಬೆಳಕಿನ ಆಟವೆಂದರೂ ಇಂದ್ರೀಯಗಳು ನೀಡಿದ ಅನುಭವಕ್ಕೆ ಅಂತರಂಗ ಸ್ಪಂದಿಸಿದ್ದು ಸೂರ್ಯ ಪ್ರಕಾಶದಷ್ಟೇ ಸತ್ಯ ನಾವು ಎದುರಿಸುವ ಒಳಿತು ಕೆಡುಕುಗಳ ಅನುಭವವು ಆಂತರ್ಯದ ಮೇಲೆ ಪ್ರಭಾವ ಬೀರುವದೂ ಸತ್ಯ

ಮನುಷ್ಯ ದೇವನಿತ್ತ ಅಮೂಲ್ಯ ಬುದ್ಧಿಯನ್ನು ಶ್ರಮರಹಿತ ಸುಖ ಜೀವನಕ್ಕಾಗಿ ಸಂಶೋಧನೆಗಳನ್ನು ಮಾಡಲು ಉಪಯೋಗಿಸಿದ. ಅದರ



ಪರಿಣಾಮವಾಗಿಯೇ ಇಂದು ಜೀವನ ಕ್ರಮದಲ್ಲಿ ಆವಿಷ್ಕಾರಗಳಿಂದ ವ್ಯತ್ಯಾಸ ಕಂಡು ಬರುತ್ತಿದೆ.ಆವಿಷ್ಕಾರಗಳು ಬೇಡವೆಂದಲ್ಲ. ಅವುಗಳನ್ನು ಸದುಪಯೋಗಪಡಿಸಿಕೊಳ್ಳುವ ಕ್ರಮ ತಿಳಿದು ಪಾಲಿಸಬೇಕು. ಪ್ರಕೃತಿಯ ಯೋಚನೆಯನ್ನು ಬಿಟ್ಟು ಆವಿಷ್ಕಾರಗಳನ್ನೇ ಹೊದ್ದುಕೊಳ್ಳುತ್ತಿದ್ದೇವೆ. ಅಭಿವೃದ್ಧಿಯ ಹೆಸರಿನಲ್ಲಿ ಬದುಕಿನ ಮೂಲ ಆಶಯವಾದ ಶಾಂತಿಯನ್ನೇ ಕಳೆದುಕೊಳ್ಳುತ್ತಿದ್ದೇವೆ. ಒತ್ತಡದ ಜೀವನದಲ್ಲಿ ಸಿಲುಕಿಹಾಕಿಕೊಂಡಿದ್ದೇವೆ. ಒತ್ತಡಮುಕ್ತ ಯೋಚನೆಗಳಿಂದ ಆರೋಗ್ಯಕರ ಜೀವನಶೈಲಿ ಪ್ರಕೃತಿಯೊಂದಿಗೆ ಮುದವಾಗಿ ಬೆರೆಯುತ್ತ ಬದುಕಿನ ಹರಿವಿನ ವೇಗಕ್ಕೆ ಒಗ್ಗಿಕೊಂಡರೆ ಬದುಕು ತಿರುಕ ಕಂಡ ಕನಸಿನಂತಾಗುವುದಿಲ್ಲ. ಆಹಾ! ಈ ಬದುಕಿನ ಸವಿ ಸ್ವರ್ಗಕ್ಕೂ ಮಿಗಿಲಾದದ್ದು ಎಂದೆನಿಸದೇ ಇರದು.

# ಸನ್ಮಾರ್ಗದಲ್ಲಿ ನಡೆದರೆ ಭಗವಂತ ಒಳ್ಳೆಯದು ಮಾಡುತ್ತಾನೆ :ಡಾ.ಶಿವಕುಮಾರ ಶ್ರೀ



**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ಜೀವನದಲ್ಲಿ ಯಾರೂ ದುಡಿಮೆ ಮಾಡುತ್ತಾರೋ ಅಂತಹವರು ಸುಂದರವಾದ ಜೀವನ ಸಾಗಿಸುತ್ತಾರೆ. ಜೀವನದಲ್ಲಿ ಆಚಾರ-ವಿಚಾರವಂತರಾಗಿ ಸನ್ಮಾರ್ಗದಲ್ಲಿ ಸಾಗಿದರೆ ಭಗವಂತನು ಖಂಡಿತ ಒಳ್ಳೆಯದು ಮಾಡುತ್ತಾನೆ ಎಂದು ಕೆರೂರ-ಕೊಣ್ಣೂರಿನ ಡಾ.ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲೂಕಿನ ಮನಗೂಳಿ ಪಟ್ಟಣದ ಪಟ್ಟೇಕಂಥಿ ಹಿರೇಮಠದ ಮಹಾಂತ ಶಿವಾಚಾರ್ಯ ಸ್ವಾಮೀಜಿಯವರ 75 ನೇ ಯಾತ್ರಾಮಹೋತ್ಸವ ಹಾಗೂ ಸಂಗನಬಸವ ಶಿವಾಚಾರ್ಯ ಸ್ವಾಮೀಜಿಯುವರ 23 ನೇ ಸಂಸ್ಮರಣೋತ್ಸವ ಹಾಗೂ ಗುರು ಮಹಾಂತೇಶ್ವರ ಶ್ರೀ ಪ್ರಶಸ್ತಿ ಪ್ರದಾನ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣೆಯಂಗವಾಗಿ ಬುಧವಾರ ಭಜನಾ ಮಂಟಪದಲ್ಲಿ ಹಮ್ಮಿಕೊಂಡಿದ್ದ ಧರ್ಮಜಾಗೃತಿ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಹಾತ್ಮರನ್ನು ಸ್ಮರಣೆ ಮಾಡುವದರಿಂದ ಘನವಾದ ಮುಕ್ತಿ ಸಿಗುತ್ತದೆ. ಪರಮಾತ್ಮ ನಿರಾಕಾರ ರೂಪದಲ್ಲಿದ್ದಾನೆ. ಮಹಾತ್ಮರ ಲೀಲೆಗಳು ಪರಮಾತ್ಮನ ಇರುವಿಕೆಯನ್ನು ತೋರಿಸುತ್ತವೆ. ಅಪ್ರತ್ಯಕ್ಷವಾಗಿರುವ ದೇವರು ಗುರುವಿನ ರೂಪದಲ್ಲಿ ಕಾಣುತ್ತಾನೆ ಎಂದು ಸಿದ್ಧಾಂತ ಶಿಖಾಮಣಿಯಿಂದ ಗೊತ್ತಾಗುತ್ತದೆ ಎಂದರು.

ಬಹಿರಂಗ ಆಚಾರವೆಂದರೆ ದೇಹವನ್ನು ಶುದ್ಧಿಯಾಗಿಟ್ಟುಕೊಳ್ಳುವುದು. ಅಂತರಂಗ ಆಚಾರವೆಂದರೆ ಮಹಾತ್ಮರ ಅಮೃತವಾಣಿಗಳಿಂದ ಅಂತರಂಗವನ್ನು ಶುದ್ಧಿವಾಗುತ್ತದೆ. ನಮ್ಮ ಸಂಸ್ಕೃತಿ-ಸಂಸ್ಕಾರವನ್ನು ಎಂದಿಗೂ ಬಿಡಬಾರದು. ಇಂದು ಪ್ಯಾಶನ್ ಹೆಸರಿನಲ್ಲಿ ಹರಿದ ಬಟ್ಟೆಗಳನ್ನು ಹಾಕಿಕೊಳ್ಳುತ್ತಿರುವುದು ನಮ್ಮ ಭಾರತೀಯ ಸಂಸ್ಕೃತಿಗೆ ಗೌರವ ತರುವಂತಹದಲ್ಲ. ಭಾರತೀಯ ಸಂಸ್ಕೃತಿಯ ಬಟ್ಟೆ ಧರಿಸುವಂತೆ ನಿಜವಾದ ಸಂಸ್ಕೃತಿ. ಯುವಜನಾಂಗ ಯಾವುದೇ ದುಶ್ಚಟಗಳಿಗೆ ದಾಸರಾಗದೇ ಉತ್ತಮ ಜೀವನ ಸಾಗಿಸಬೇಕೆಂದ ಅವರು, ವಿದ್ಯೆ ದೈವ ಬಲವಾಗಿದೆ. ದೇವ ಕೊಟ್ಟ ವಿದ್ಯೆಯಿಂದ ಉತ್ತಮ ಜೀವನ ಸಾಗಿಸಬೇಕು.

ಪಟ್ಟೇಕಂಥಿ ಹಿರೇಮಠದ ಡಾ.ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿಯವರು ಬೆಂಗಳೂರಿನ ವಿಭೂತಿಪುರ ಮಠದಿಂದ ಬೆಂಗಳೂ-ರಿನಲ್ಲಿ ಉತ್ತಮ ಗುಣಮಟ್ಟದ ಶಾಲೆಯನ್ನು ಆರಂಭಿಸಿದ್ದಾರೆ. ಈ ಶಾಲೆಯಲ್ಲಿ 300 ಬಡ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುತ್ತಿದ್ದಾರೆ ಎಂದರು.

ನೇತೃತ್ವದ ವಹಿಸಿದ್ದ ಶ್ರೀಮಠದ ಡಾ.ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಗುರುವಿನ ಆಶೀರ್ವಾದವಾದರೆ ಮನುಷ್ಯನು ಮಹಾದೇವನಾಗುತ್ತಾನೆ. ಗುರುವಿನ ಆಶೀರ್ವಾದ ಸದಾ ಇರಬೇಕು.ನಾನು ಸದಾ ಭಕ್ತರ ಸಂಕಷ್ಟ ದೂರಮಾಡಬೇಕೆಂದು ದೇವರಲ್ಲಿ ಪ್ರಾರ್ಥಿಸುವೆ.ಈ ವರ್ಷ ನಾಡಿನಲ್ಲಿ ಉತ್ತಮ ಮಳೆ-ಬೆಳೆ ಆಗಲೆಂದು ದೇವರಲ್ಲಿ ಪ್ರಾರ್ಥಿಸುವೆ ಎಂದರು.

ಪಾಲಕರು ಮಕ್ಕಳಿಗೆ ಶಿಕ್ಷಣದೊಂದಿಗೆ ಸಂಸ್ಕಾರ ಕೊಡದೇ ಹೋದರೆ ಅವರು ದುರಾಚಾ-ರಿಗಳಾಗುತ್ತಾರೆ. ಮಕ್ಕಳಿಗೆ ದೇವರ ಮೇಲೆ ಭಕ್ತಿ, ಗುರು-ಹಿರಿಯರಿಗೆ ಗೌರವ ಕೊಡುವ ಸಂಸ್ಕಾರ ಕೊಡಬೇಕು. ಈ ಪಟ್ಟಣದಲ್ಲಿರುವ ಶ್ರೀಮಠದ ಶಾಲೆಯಲ್ಲಿ 10 ನೇ ತರಗತಿಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗಿನೊಂದಿಗೆ ಅಗತ್ಯ ಪಠ್ಯ ಪರಿಕರಗಳನ್ನು ಇಂದು ವಿತ-ರಿಸಲಾಗಿದೆ. ಇದರ ಸದುಪಯೋಗ ಪಡೆದುಕೊಂಡು ಸಾಧನೆ ಮಾಡುವ ಮೂಲಕ ಪಟ್ಟಣದ ಕೀರ್ತಿ ಹೆಚ್ಚಿಸಬೇಕು.ಸತ್ಪ್ರಜೆಗಳಾಗಿ ಹೊರಹೊಮ್ಮಬೇಕೆಂದರು.

ಧುರೀಣ ಅಪ್ಪುಗೌಡ ಪಾಟೀಲ ಮಾತನಾಡಿ, ಧಾರ್ಮಿಕ ಕಾರ್ಯಕ್ರಮಗಳಿಂದ ಜೀವನಕ್ಕೆ ಉತ್ತಮ ಸಂದೇಶ ಸಿಗುವ ಜೊತೆಗೆ ಅನೇಕ ಶ್ರೀಗಳ ಆಶೀರ್ವಾದ ಸಿಗುತ್ತದೆ. ದಾನ ಮಾಡುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು. ಜಗತ್ತಿನಲ್ಲಿ ಹಣಕ್ಕಿಂತಲೂ ಅನ್ನ ಸಾಕು ಅನ್ನುವರು. ಪ್ರಶಸ್ತಿಗಳು ಸಮಾಜಕ್ಕೆ ಸೇವೆ ನೀಡಿದವರನ್ನು ಪರಿಚಯಿಸುವ ಜೊತೆಗೆ ಅವರಿಂದ ಇತರರಿಗೆ ಸಮಾಜ ಸೇವೆ ಮಾಡಲು ಪ್ರೇರಣೆ ಸಿಗುತ್ತದೆ ಎಂದರು.

ಡಿಸಿಸಿ ಬ್ಯಾಂಕಿನ ನಿರ್ದೇಶಕ ಚಂದ್ರಶೇಖರಗೌಡ ಪಾಟೀಲ ಮಾತನಾಡಿ, ಇಂದು ಮಕ್ಕಳಿಗೆ ಉತ್ತಮ ಶಿಕ್ಷಣ, ಸಂಸ್ಕೃತಿ,ಸಂಸ್ಕಾರ ನೀಡುವ ಅಗತ್ಯವಿದೆ. ಶ್ರೀಮಠವು ಈ ದಿಶೆಯಲ್ಲಿ ಮಠದಿಂದ ನಡೆಯುವ ಶಾಲೆಗಳಿಂದ ಮಾಡುತ್ತಿದೆ ಎಂದರು.

ಗುಳೇದಗುಡ್ಡದ ಡಾ.ನೀಲಕಂಠ ಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು.

ವೇದಿಕೆಯಲ್ಲಿ ಬೃಂಗೀಶ್ವರ ಶಿವಾಚಾರ್ಯ ಸ್ವಾಮೀಜಿ, ಶಿವಾನಂದ ದೇವರು, ಇಟಗಿಶ್ರೀಗಳು, ನಾಗಭೂಷಣ ಶಾಸ್ತ್ರೀಜಿ, ಸುಭಾಸಗೌಡ ಪಾಟೀಲ, ಬಿ.ಎಂ ಪಾಟೀಲ, ಪಪಂ ಮುಖ್ಯಾಧಿಕಾರಿ ಎಸ್.ಐ. ರೇವೂರಕರ ಇದ್ದರು. ಇದೇ ಸಂದರ್ಭದಲ್ಲಿ ಗುತ್ತಿಗೆದಾರ ಎಸ್.ಎಸ್.ಆಲೂರ ದಂಪತಿಗಳಿಗೆ ಶ್ರೀಮಠದಿಂದ ಗುರು ಮಹಾಂತೇಶ್ವರ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ಎಸ್.ಐ. ಬಿರಾದಾರ ಸ್ವಾಗತಿಸಿದರು. ಸಂಗಮೇಶ ಬೆಣ್ಣೂರ ನಿರೂಪಿಸಿ, ವಂದಿಸಿದರು.

ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಶ್ರೀಮಠದ ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗಿನೊಂದಿಗೆ ಪಠ್ಯಪ-ರಿಕರಗಳನ್ನು ವಿತರಿಸಲಾಯಿತು.

ಕಾರ್ಯಕ್ರಮಕ್ಕೂ ಮುನ್ನ ಗುರು ಮಹಾಂತೇಶ್ವರರ ಹಾಗೂ ಗುರು ಸಂಗನಬಸವ ಶಿವಾಚಾರ್ಯರ ರಜತ ಮೂರ್ತಿಗಳ ಬೆಳ್ಳಿ ಅಡ್ಡಪಲ್ಲಕ್ಕಿ ಮಹೋತ್ಸವವು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಕಲ ವಾದ್ಯ ವೈಭವದೊಂದಿಗೆ ಜರುಗಿದ ನಂತರ ರಥೋತ್ಸವ, ಶ್ರೀಮಠದ ಪೂಜ್ಯರ ಸಿಂಹಾಸನಾರೋಹಣ ನೆರವೇರಿತು.

# ಬಸವನಬಾಗೇವಾಡಿ: ಧರ್ಮ ಜಾಗೃತಿ ಸಮಾರಂಭ



**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ತಾಲೂಕಿನ ಮನಗೂಳಿ ಪಟ್ಟಣದ ಪಟ್ಟೇಕಂಥಿ ಹಿರೇಮಠದ ಮಹಾಂತ ಶಿವಾಚಾರ್ಯ ಸ್ವಾಮೀ-ಜಿಯುವರ 75 ನೇ ಯಾತ್ರಾ ಮಹೋತ್ಸವ ಹಾಗೂ ಸಂಗನಬಸವ ಶಿವಾಚಾರ್ಯ ಸ್ವಾಮೀಜಿಯವರ 23 ನೇ ಸಂಸ್ಮರಣೋತ್ಸವದಂಗವಾಗಿ ಬುಧವಾರ ಹಮ್ಮಿಕೊಂಡಿದ್ದ ಧರ್ಮ ಜಾಗೃತಿ ಸಮಾರಂಭದಲ್ಲಿ ಶ್ರೀಮಠದ ಸಂಗನಬಸವ ಶಿವಾಚಾರ್ಯ ಸ್ವಾಮೀಜಿ ಶಾಲೆಯಲ್ಲಿ ಹತ್ತನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಶಾಲಾಬ್ಯಾಗ್, ಪಠ್ಯ ಪರಿಕರಗಳನ್ನು ಡಾ.ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ವಿತರಿಸಿದರು.

# ಪಂಚಾಯತ್ ರಾಜ್.. ಒಂದು ಅವಲೋಕನ

ವೀಣಾಂತರಂಗ



-ವೀಣಾ ಎಚ್. ಪಾಟೀಲ್, ಮುಂಡರಗಿ


**ಉದಯರಶ್ಮಿ ದಿನಪತ್ರಿಕೆ**

ಗ್ರಾಮೀಣ ಜನರ ಬದುಕಿನ ಬವಣೆಗಳನ್ನು ನೀಗಿಸುವ, ಅವರಿಗೆ ಸ್ಥಳೀಯವಾಗಿ ಆಡಳಿತ ನಡೆಸಲು ಅನುಕೂಲವಾಗುವ ನಿಟ್ಟಿನಲ್ಲಿ ಜಾ-ರಿಯಾಗಿರುವ ಸ್ಥಳೀಯ ಆಡಳಿತಾತ್ಮಕ ವ್ಯವಸ್ಥೆಯನ್ನೇ ಪಂಚಾಯತ್ ರಾಜ್ ಎಂದು ಕರೆಯುವುದು. ಇದನ್ನು ಮುಖ್ಯವಾಗಿ ಮೂರು ವಲಯಗಳಲ್ಲಿ ಗುರುತಿಸಲಾಗಿದ್ದು ಗ್ರಾಮ ವ್ಯಾಪ್ತಿಯುಲ್ಲಿ ಗ್ರಾಮ ಪಂಚಾಯಿತಿ, ತಾಲೂಕುಗಳ ವ್ಯಾಪ್ತಿಯಲ್ಲಿ ತಾಲೂಕು ಪಂಚಾಯಿತಿ ಮತ್ತು ಜಿಲ್ಲೆಗಳ ವ್ಯಾಪ್ತಿಯಲ್ಲಿ ಜಿಲ್ಲಾ ಪಂಚಾಯಿತಿ/ ಪರಿಷತ್ ಎಂದು ಗುರುತಿಸಲಾಗಿದೆ.

20 ಲಕ್ಷಕ್ಕಿಂತಲೂ ಕಡಿಮೆ ಮತದಾರರನ್ನು ಹೊಂದಿರುವ ಭಾಗದಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೇವಲ ಎರಡು ರೀತಿಯ ಪಂಚಾಯತ್ ವ್ಯವಸ್ಥೆಗಳು ಇದ್ದು ಆಡಳಿತ ನಡೆಸಲು ಅನುಕೂಲ ಕಲ್ಪಿಸಲಾಗಿದೆ.

ಎಲ್ಲಾ 3 ಪಂಚಾಯಿತಿ ವ್ಯಾಪ್ತಿಗಳಲ್ಲಿ ಪ್ರತಿ ಐದು ವರ್ಷಕ್ಕೊಮ್ಮೆ ಚುನಾವಣೆಗಳು ಜರುಗುತ್ತವೆ. ಆಯಾ ಪಂಚಾಯಿತಿಗಳ ವ್ಯಾಪ್ತಿಗಳಲ್ಲಿ ಇರುವ ಜನರು ಮತದಾನದ ಹಕ್ಕನ್ನು ಹೊಂದಿರುತ್ತಾರೆ. ಈ ಚುನಾವಣೆಗಳಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಸದಸ್ಯರು ಕಡ್ಡಾಯವಾಗಿ ಇರಲೇಬೇಕು. ಇದರ ಜೊತೆಗೆ ಆಯಾ ಪಂಚಾಯಿತಿ ವ್ಯಾಪ್ತಿಯಲ್ಲಿ ಅಧ್ಯಕ್ಷರು ಮತ್ತು ಮಹಿಳಾ ಸದಸ್ಯರು ಮೂರನೇ ಒಂದು ಭಾಗದಷ್ಟು ಇರಲೇಬೇಕು.

ಸಂವಿಧಾನದ 73ನೇ ಅಧಿನಿಯಮವನ್ನು ತಿದ್ದುಪಡಿ ಮಾಡುವ ಮೂಲಕ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಮತ್ತಷ್ಟು ಬಲಗೊಳಿಸಿ 1992 ರಲ್ಲಿ ಜಾರಿಗೆ ತರಲಾಯಿತು. ಹಲವಾರು ಗುರುತರ ಬದಲಾವಣೆಗಳನ್ನು ತರುವ ಮೂಲಕ 1999 ಏಪ್ರಿಲ್ ನಲ್ಲಿ



ಪಂಚಾಯತ್ ರಾಜ್ ವ್ಯವಸ್ಥೆಯನ್ನು ಮತ್ತಷ್ಟು ಬಲಯುತವಾಗಿ ಜಾ-ರಿಯಲ್ಲಿರಿಸಲಾಯಿತು. ನಮ್ಮ ಭಾರತ ದೇಶದಲ್ಲಿ ನಾಗಾಲ್ಯಾಂಡ, ಮಿಜೋರಾಂ ಮತ್ತು ಮೇಘಾಲಯ ರಾಜ್ಯಗಳು ಮತ್ತು ದೆಹಲಿ ಕೇಂದ್ರಾಡಳಿತ ಪ್ರದೇಶವನ್ನು ಹೊರತುಪಡಿಸಿ ಇನ್ನುಳಿದ ಎಲ್ಲ ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ವ್ಯವಸ್ಥೆಯು ಜಾರಿಯಲ್ಲಿದೆ.

ಪ್ರತಿಯೊಂದು ಗ್ರಾಮವು ರಾಜ-ಕೀಯವಾಗಿ ಸಶಕ್ತವಾಗಿರಬೇಕು ಮತ್ತು ತನ್ನ ಗ್ರಾಮದ ಕುಂದು ಕೊರತೆಗಳನ್ನು ಅಭಿವೃದ್ಧಿ ಕಾರ್ಯಗಳ ವ್ಯವಸ್ಥೆಯನ್ನು ತಾನೆ ನೋಡಿಕೊಳ್ಳಬೇಕು, ತನ್ಮೂಲಕ ಸಶಕ್ತ ಗ್ರಾಮವಾಗಿ ಬೆಳೆಯಬೇಕು ಎಂಬುದು ಗಾಂಧೀಜಿಯವರ ಸ್ವರಾಜ್ಯದ ಮೂಲ ಕಲ್ಪನೆಯಾಗಿತ್ತು. ಪಂಚಾಯತ್ ರಾಜ್ ವ್ಯವಸ್ಥೆಯು ನಮ್ಮ ರಾಜಕೀಯ ವ್ಯವಸ್ಥೆಯ ಬುನಾದಿ ಎಂದು ಪ್ರತಿಪಾದಿಸಿದ ಅವರು ಆಯಾ ಪಂಚಾಯಿತಿಗಳ ವ್ಯಾಪ್ತಿಗಳಲ್ಲಿ ಬರುವ ಮೂಲಭೂತ ಸಮಸ್ಯೆಗಳು ಮತ್ತು ಅವುಗಳ ನಿವಾರಣಾತ್ಮಕ ಕಾರ್ಯಗಳಿಗಾಗಿ ಅಲ್ಲಿಯುದೇ ಚುನಾಯಿತ ಸದಸ್ಯರನ್ನೊಳಗೊಂಡಿದ್ದು ಜೊತೆಗೆ ಸ್ಥಳೀಯ ಆಡಳಿತಾಧಿಕಾರಿಗಳನ್ನು ಒಳಗೊಂಡ ಸಮಿತಿಯುನ್ನು ಹೊಂದಿದ್ದು ಈರ್ವರು ಜೊತೆಯಾಗಿ ವಿವಿಧ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವ ಮೂಲಕ ಅಲ್ಲಿಯ



ಮೂಲಭೂತ ಸಮಸ್ಯೆಗಳನ್ನು ಪೂರೈಸುವುದರ ಜೊತೆ ಜೊತೆಗೆ ಅಭಿವೃದ್ಧಿ ಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಅವುಗಳನ್ನು ಪೂರೈಸುವುದು ಇವರ ಕಾರ್ಯ ವ್ಯಾಪ್ತಿಯಲ್ಲಿ ಬರುತ್ತವೆ.

1953 ರಲ್ಲಿ ಬಲವಂತರಾಯ್ ಮೆಹ್ತಾ ಆಯೋಗವು ಸ್ಥಳೀಯ ಅಧಿಕಾರ ವಿಕೇಂದ್ರೀಕರಣವನ್ನು ಅನುಮೋದಿಸಿ ಸ್ಥಳೀಯ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಜೀವನದಲ್ಲಿ ಪರಿವರ್ತನೆಯನ್ನು ತರುವ ಸಲುವಾಗಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅನುಮೋದಿಸಿದರು. ಆರ್ಥಿಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಕ್ರಿಯೆಯನ್ನು ಸೃಷ್ಟಿಸಲು, ಸ್ವಸಹಾಯವನ್ನು ಮತ್ತು ಪರಾವಲಂಬನೆಯನ್ನು ತಪ್ಪಿಸಲು ಸ್ವಯಂ ಆಡಳಿತದ ಈ ವ್ಯವಸ್ಥೆಯನ್ನು 1957ರಲ್ಲಿ ಜಾರಿಗೆ ತರಲಾಯಿತು. ಆಡಳಿತವನ್ನು ಸುಲಭಗೊಳಿಸಲು ತರಬೇತುಗೊಳಿಸಲ್ಪಟ್ಟ ಗ್ರಾಮ ಸಹಾಯಕರನ್ನು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ನೇಮಿಸಲಾಯಿತು.

* ಸಾಮುದಾಯಿಕ ಕೃಷಿ ಮತ್ತು ಪಶು ಸಂಗೋಪನೆಗೆ ಪ್ರೋತ್ಸಾಹ ನೀಡುವುದು,

* ಗುಡಿ ಕೈಗಾರಿಕೆಗಳಿಗೆ ಉತ್ತೇಜನ ನೀಡುವುದು

* ಸಾಂಪ್ರದಾಯಿಕ ಮಾದ-ರಿಯ ಒಕ್ಕಲುತನ ಹುಟ್ಟುವಳಿಗೆ ಸಹಾಯಕವಾಗುವ ವಿವಿಧ ವರ್ಗಗಳ ಜನರಿಗೆ ಉದ್ಯೋಗಾವಕಾಶವನ್ನು ಸ್ಥಳೀಯವಾಗಿ ಕಲ್ಪಿಸುವುದು

* ಮಹಿಳೆಯರು ಮತ್ತು ಮಕ್ಕಳನ್ನು ಸಮುದಾಯದ ಭಾಗವಾಗಿ ಭಾಗವಹಿಸಲು ಉತ್ತೇಜಿಸುವುದು

* ವಿವಿಧ ಅಭಿವೃದ್ಧಿಪರ ಕಾರ್ಯಕ್ರಮಗಳನ್ನು ಯೋಜಿಸುವುದು ಮತ್ತು ಅವುಗಳನ್ನು ಅನುಷ್ಠಾನಗೊಳಿಸುವುದು

* ಕರಗಳನ್ನು ಸಂಗ್ರಹಿಸುವುದು, ಮನೆಗಳನ್ನು ಮತ್ತು ಉಳುವ ಭೂಮಿಯನ್ನು ವ್ಯವಸ್ಥಿತವಾಗಿ ಸಮೀಕ್ಷೆ ಮಾಡುವ ಮೂಲಕ ಅವುಗಳ ಉತಾರಗಳು ಮತ್ತು ಹಕ್ಕು ಪತ್ರಗಳ ದಾಖಲಾತಿಗಳನ್ನು ಇಡುವುದು ಮುಂತಾದ ಕೆಲಸಗಳು ಇವರ ವ್ಯಾಪ್ತಿಯಲ್ಲಿ ಬರುತ್ತವೆ.

ನಮ್ಮ ಕರ್ನಾಟಕ ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯ ಕುರಿತಾದ ವಿಸ್ತೃತ ಅಧ್ಯಯನಕ್ಕೆ ಅನುಕೂಲವಾಗಲೆಂದು ಗದಗ ಜಿಲ್ಲೆಯ ನಾಗಾವಿ ಎಂಬ ಗ್ರಾಮದಲ್ಲಿ ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ.









ಪ್ರತಿ ವರ್ಷ ಏಪ್ರಿಲ್ 24ರಂದು ಪಂಚಾಯತ್ ರಾಜ್ ದಿವಸವೆಂದು ಆಚರಿಸಲಾಗುತ್ತಿದ್ದು ಆ ದಿನ ಉತ್ತಮವಾಗಿ ಕಾರ್ಯನಿರ್ವಹಿಸಿದ ಗ್ರಾಮ ಪಂಚಾಯಿತಿಗಳನ್ನು ಗುರುತಿಸಿ ದೀನ್ ದಯಾಳ್ ಉಪಾಧ್ಯಾಯ ಪಂಚಾಯತ್ ಸಶಕ್ತಿಕರಣ ಪ್ರಶಸ್ತಿಯನ್ನು ಕೊಡ ಮಾಡುತ್ತಾರೆ. ನಾನಾಜಿ ದೇಶಮುಖ ಸರ್ವೋತ್ತಮ ಪಂಚಾಯತ ಪ್ರಶಸ್ತಿ ಸತತ ವಿಕಾಸ ಪುರಸ್ಕಾರ ಮತ್ತು ಇನ್ನೂ ಹಲವಾರು ಪ್ರಶಸ್ತಿಗಳನ್ನು ಕೊಡ ಮಾಡುವ ಮೂಲಕ ಪಂಚಾಯತ್ ವ್ಯವಸ್ಥೆಯನ್ನು ಇನ್ನಷ್ಟು ವ್ಯವಸ್ಥಿತವಾಗಿ ಅನುಷ್ಠಾನಕ್ಕೆ ತರಲು ಪ್ರೋತ್ಸಾಹಿಸಲಾಗುತ್ತದೆ.

ರಾಷ್ಟ್ರೀಯ ಪಂಚಾಯತ್ ರಾಜ್ ಪ್ರಶಸ್ತಿಗೆ ಅರ್ಹವಾಗಲು ಪ್ರತಿಯೊಂದು ಗ್ರಾಮ ಪಂಚಾಯಿತಿಗಳು ಈ ನವ ಅಂಶಗಳಲ್ಲಿ ಉನ್ನತಿಯನ್ನು ಸಾಧಿಸಬೇಕು.

"ಬಡತನ ರಹಿತ ಮತ್ತು ಸುಧಾರಿತ

ಜೀವನ ಮಟ್ಟ

* ಆರೋಗ್ಯಕರ ಪಂಚಾಯತಿ

* ಮಕ್ಕಳ ಸ್ನೇಹಿ ಪಂಚಾಯತಿ

* ಜಲ ಸ್ವಾಯುತ್ತತೆಯನ್ನು ಹೊಂದಿರುವ ಪಂಚಾಯಿತಿ

* ಸ್ವಚ್ಛ ಮತ್ತು ಹಸಿರು ಯುಕ್ತ ಪಂಚಾಯಿತಿ

* ಬಲಿಷ್ಠ ಕಟ್ಟಡವನ್ನು ಹೊಂದಿರುವ ಪಂಚಾಯಿತಿ

* ಸಾಮಾಜಿಕ ಸುರಕ್ಷತೆಯನ್ನು ಅಳವಡಿಸಿಕೊಂಡಿರುವ ಪಂಚಾಯಿತಿ

* ಉತ್ತಮ ಆಡಳಿತ ನಿರ್ವಹಿಸುವ ಪಂಚಾಯಿತಿ

*ಮಹಿಳಾ ಸ್ನೇಹಿ ಪಂಚಾಯತಿ

ಪಂಚಾಯತ್ ರಾಜ್ ವ್ಯವಸ್ಥೆಯು ದೇಶದ ಸರ್ವಾಂಗೀಣ ಅಭಿವೃದ್ಧಿಗೆ ಮೂಲ ಬುನಾದಿಯಾಗಿದ್ದು ಅದರ ತಳಹದಿಯ ಮೇಲೆ ಸಶಕ್ತ ಭಾರತವನ್ನು ಕಟ್ಟುವ ಗಾಂಧೀ-ಜಿಯವರ ಕನಸು ನನಸಾಗಿದೆ. ಈ ವ್ಯವಸ್ಥೆ ಇನ್ನೂ ಹೆಚ್ಚು ಅಭಿವೃದ್ಧಿಯನ್ನು ಕಾಣಲಿ.

ಪಂಚಾಯತ್ ರಾಜ್ ಸಶಕ್ತವಾಗಿರಲಿ.

ನೀತಿಸಂಹಿತೆ ಉಲ್ಲಂಘನೆ ಆರೋಪ | ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಆಗ್ರಹ

# ಕಾಂಗ್ರೆಸ್-ಬಿಜೆಪಿ ಅಭ್ಯರ್ಥಿಗಳ ಉಮೇದುವಾರಿಕೆ ಅಸಿಂಧುಗೊಳಿಸಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ಕಾಂಗ್ರೆಸ್ ಮತ್ತು ಬಿಜೆಪಿ ಉಮೇದುದಾರರ ಉಮೆದುದಾರಿಕೆ ರದ್ದುಪಡಿಸುವಂತೆ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ವಿಜಯಪುರ ಜಿಲ್ಲಾ ಲೋಕಸಭಾ ಅಭ್ಯರ್ಥಿಯಾದ ಗಣಪತಿ ಲಾಲಾಸಿಂಗ್ ರಾಠೋಡ ಆಗ್ರಹಪಡಿಸಿದ್ದಾರೆ.



ದಿನಾಂಕ :07-05-2024 ರಂದು ವಿಜಯಪುರ ಜಿಲ್ಲೆಯ ಲೋಕಸಭಾ ಕ್ಷೇತ್ರಕ್ಕೆ ನಡೆದ ಮತದಾನದ ದಿನದಂದು ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷದ ಅಭ್ಯರ್ಥಿಗಳು ತಮ್ಮ ಪಕ್ಷದ ಚಿಹ್ನೆ ಮತ್ತು ಅವರ ಭಾವಚಿತ್ರ ಇರುವ ಕರಪತ್ರಗಳನ್ನು ಲಕ್ಷಗಟ್ಟಲೆ ಮುದ್ರಿಸಿ ಪ್ರತಿ ಮತದಾರರ ಕೈಯಲ್ಲಿ ಕೊಟ್ಟು ಒತ್ತಾಯ ಪೂರ್ವಕವಾಗಿ ಮತದಾರರು ಮತಗಟ್ಟೆಗೆ ತರುವಂತೆ ಮಾಡಿ ತಮ್ಮ ಪಕ್ಷಕ್ಕೆ ಮತ ಹಾಕುವಂತೆ ಬಲವಂತ ಪಡಿಸಲಾಗಿದೆ. ಮತಗಟ್ಟೆಯಿಂದ ನೂರು ಮೀಟರ್ ಒಳಗಡೆ ಯಾವುದೇ ರೀತಿಯ ಪಕ್ಷದ ಪ್ರಚಾರ ಮಾಡುವುದು ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯಾಗಿದೆ. ಇದು ಕೇವಲ ನಾಲ್ಕು ಐದು ಹಳ್ಳಿಗಳಲ್ಲಿ ಆಗಿಲ್ಲ. ಇಡಿ ಜಿಲ್ಲೆಯಲ್ಲಿರುವ 2600ಕ್ಕೂ ಹೆಚ್ಚು ಮತಗಟ್ಟೆಗಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷದ ಅಭ್ಯರ್ಥಿಗಳು ಮತದಾರರ ಮೇಲೆ ಒತ್ತಡ ಮತ್ತು ಬೆದರಿಕೆ ಒಡ್ಡುವ ತಂತ್ರದ ಬಾಗವಾಗಿ ಕರಪತ್ರಗಳನ್ನು ಹಂಚಿವೆ ಏನು ತಿಳಿಯುದ ಹಳ್ಳಿಯ ಮತದಾರರು ಅದೇ ಕರ ಪತ್ರಗಳನ್ನು ತೆಗೆದುಕೊಂಡು ಮತಗಟ್ಟೆಗೆ ಬಂದಿರುತ್ತಾರೆ ಮತ್ತು ತಮ್ಮ ಕೈಯಲ್ಲಿರುವ ಕರಪತ್ರದ ಚಿಹ್ನೆಗೆ ಮತ ಹಾಕುವಂತೆ ಮಾಡಿರುತ್ತಾರೆ. ಇದು ನೇರವಾಗಿ ಮತದಾರರ ಮೇಲೆ ಪರಿಣಾಮ ಬೀರಿದೆ ಮತ್ತು ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯಾಗಿದೆ. ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷದ ಅಭ್ಯರ್ಥಿಗಳು ಉದ್ದೇಶಪೂರ್ವಕವಾಗಿ ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘಿಸಿ/ ಧಿಕ್ಕರಿಸಿ ಮತದಾರರನ್ನು ಬಲವಂತವಾಗಿ ತಮ್ಮ ಪಕ್ಷಕ್ಕೆ ಮತ ಹಾಕುವಂತೆ ಒತ್ತಾಯಿಸಿರುತ್ತಾರೆ. ಈ ಕುರಿತ್ತು ಫೇಸ್ ಬುಕ್ ಲೈವ್ ಕೂಡ ಮಾಡಿರುತ್ತೇವೆ. ಈ ಕುರಿತು ವಿಚಾರಣೆಗೆ ಕರೆದರೆ ವಿಡಿಯೋ ಸಾಕ್ಷಿ ಒದಗಿಸಲಾಗುವುದು. ಆದ್ದರಿಂದಾಗಿ ಈ ಇಬ್ಬರು ಉಮೇದುದಾರರ ನಾಮಪತ್ರಗಳನ್ನು ಅಸಿಂಧುಗೊಳಿಸಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿಕೊಂಡಿದ್ದಾರೆ.

ಈ ಸಂದರ್ಭದಲ್ಲಿ ವಿಜಯಪುರ ಜಿಲ್ಲಾ ಲೋಕಸಭಾ ಅಭ್ಯರ್ಥಿಯಾದ ಗಣಪತಿ ಲಾಲಾಸಿಂಗ್ ರಾಠೋಡ, ರಾಜ್ಯ ಸಂಘಟನಾ ಕಾರ್ಯದರ್ಶಿ ಶಿವಾನಂಧ ಯಡಹಳ್ಳಿ, ರಾಕೇಶ ಇಂಗಳಗಿ, ಪ್ರವೀಣ ಕನಸೆ, ಕಾಂತುಗೌಡ ಬಿರಾದಾರ, ಸುರೇಶ ನಿಡೋಣಿ, ದುರ್ಗಪ್ಪ ಬೂದಿಹಾಳ ಇದ್ದರು.

# ಬಸವ ಜಯಂತಿ ಅದ್ದೂರಿ ಆಚರಣೆಗೆ ತೀರ್ಮಾನ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಪ್ರತೀ ವರ್ಷದಂತೆ ಈ ವರ್ಷವೂ ಪಟ್ಟಣದಲ್ಲಿ ಜಗಜ್ಯೋತಿ ಬಸವೇಶ್ವರರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲು ಸಮಸ್ತ ಬಸವಾಭಿಮಾನಿಗಳು ತೀರ್ಮಾನಿಸಿದರು.



ಈ ಕುರಿತು ಪಟ್ಟಣದ ಹಳೆಯ ತರಕಾರಿ ಮಾರುಕಟ್ಟೆಯಲ್ಲಿ ಬುಧವಾರ ಸಂಜೆ ನಡೆದ ಪೂರ್ವಭಾವಿ ಸಭೆಯಲ್ಲಿ ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಪ್ರಭುರಾಜ ಕಲಬುರ್ಗಿ ಮಾತನಾಡಿ, ಪಟ್ಟಣದ ಕಿಲ್ಲಾ ಗಲ್ಲಿಯಲ್ಲಿರುವ ಹೊಸ ಮಠದಿಂದ ಬಸವೇಶ್ವರರ ಅದ್ದೂರಿ ಮೆರವಣಿಗೆ ಮಾಡುವ ಮೂಲಕ ಜಯಂತಿಯನ್ನು ಅರ್ಥಪೂರ್ಣವಾಗಿಸಲು ತೀರ್ಮಾನಿಸಿದ್ದೇವೆ. ವ್ಯಾಪಾರಸ್ಥರು ಮೇ10 ರಂದು ಮಧ್ಯಾಹ್ನ ಸ್ವಯಂಪ್ರೇರಿತರಾಗಿ ತಮ್ಮ ಅಂಗಡಿ ಮುಗ್ಗಟ್ಟುಗಳನ್ನು ಬಂದ್ ಮಾಡಿ ಮೆರವಣಿಗೆಯಲ್ಲಿ ಭಾಗಿಯಾಗುವಂತೆ ಮನವಿ ಮಾಡಿಕೊಂಡರು.

ಈ ವೇಳೆ ಪ್ರಮುಖರಾದ ರಾಜೇಂದ್ರಗೌಡ ರಾಯಗೊಂಡ, ಬಸವರಾಜ ನಂದಿಕೇಶ್ವರಮಠ ಮಾತನಾಡಿ, ಅಂದು ಸಂಜೆ 5ಗಂಟೆಗೆ ಮೆರವಣಿಗೆ ಪ್ರಾರಂಭವಾಗುವದು. ಹೊಸಮಠದಿಂದ ಸರಾಫ ಬಜಾರ, ಬಸವೇಶ್ವರ ವೃತ್ತ, ಕಿತ್ತೂರು ರಾಣಿ ಚನ್ನಮ್ಮ ವೃತ್ತ, ಸಂಗೊಳ್ಳಿ ರಾಯಣ್ಣ ವೃತ್ತ, ಅಂಬೇಡ್ಕರ್ ವೃತ್ತ, ರಾಘವೇಂದ್ರ ದೇವಸ್ಥಾನ, ಶಾರದಾ ದೇವಿ ದೇವಸ್ಥಾನ, ಬಿಎಸ್‌ಎನ್‌ಎಲ್ ಕಚೇರಿ ಮಾರ್ಗವಾಗಿ ಬೊಮ್ಮಲಿಂಗೇಶ್ವರ ದೇವಸ್ಥಾನದವರೆಗೆ ಮೆರವಣಿಗೆ ಸಾಗಲಿದೆ. ಎಲ್ಲರೂ ತಮ್ಮ ವಾಹನಗಳನ್ನು ಒಂದೆಡೆ ಬಿಟ್ಟು ಮೆರವಣಿಗೆಯಲ್ಲಿ ಭಾಗಿಯಾಗಬೇಕು. ಶುಭ್ರ (ಬಿಳಿ) ಉಡುಪು ತೊಟ್ಟು, ಹಣೆಗೆ ವಿಭೂತಿ ಧರಿಸಿ ಬಂದಲ್ಲಿ ಕಳೆ ಹೆಚ್ಚುವದು. ಎಲ್ಲ ಸಮಾಜ ಬಾಂಧವರೂ ಭಾಗಿಯಾಗುವಂತೆ ಮನವಿ ಮಾಡಿಕೊಳ್ಳಲಾಗುವದು ಎಂದರು.

ಈ ವೇಳೆ ಪ್ರಮುಖರಾದ ಚನ್ನಪ್ಪ ಕಂಠಿ, ಬಸವರಾಜ ನಾಲತವಾಡ, ಅಶೋಕ ನಾಡಗೌಡ, ಎಸ್.ಸಿ.ಹಿರೇಮಠ, ಬಸವರಾಜ ನಾಗರಾಳ, ಅಪ್ಪು ದೇಗಿನಾಳ, ರಾಜು ಕರಡ್ಡಿ, ರುದ್ರಗೌಡ ಅಂಗಡಗೇರಿ, ಮಹಾಂತೇಶ ಬೂದಿಹಾಳಮಠ, ಸದಾಶಿವ ಮಠ, ಅಮರೇಶ ಗೂಳಿ, ರಾಜು ಬಳ್ಳೊಳ್ಳಿ, ಎಸ್.ಕೆ.ಕಟ್ಟಿ, ರುದ್ರೇಶ ಕಿತ್ತೂರ ಸೇರಿದಂತೆ ಮತ್ತಿತರರು ಇದ್ದರು

# ಅನಾರೋಗ್ಯದಿಂದ ಮೃತಪಟ್ಟ ಯೋಧ ಅಶೋಕ ಪವಾರ

**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: ಪಡಗಾನೂರ ತಾಂಡಾದ ಬಿಎಸ್‌ಎಫ್ ಯೋಧ ಅಶೋಕ ಬಾಸು ಪವಾರ(46) ಅನಾರೋಗ್ಯದಿಂದ ಮಂಗಳವಾರ ನಿಧನರಾದರು.



ತಾಲ್ಲೂಕಿನ ಪಡಗಾನೂರ ತಾಂಡಾ ನಿವಾಸಿಯಾಗಿದ್ದ ಅಶೋಕ ಬಾಸು ಪವಾರ ತ್ರಿಪುರಾದ 104 ಬೆಟಾಲಿಯನ್‌ನಲ್ಲಿ ಕಳೆದ 24 ವರ್ಷಗಳಿಂದ ಭಾರತೀಯ ಸೇನೆಯಲ್ಲಿ ಕಾರ್ಯ ನಿರ್ವಹಿಸುವ ಮೂಲಕ ದೇಶ ಸೇವೆಯಲ್ಲಿ ಪಾಲ್ಗೊಂಡಿದ್ದರು. ಕಳೆದ ತಿಂಗಳ ಹಿಂದೆಯೇ ಸ್ವಗ್ರಾಮಕ್ಕೆ ಬಂದು ಮಗನ ಮದುವೆ ಮಾಡಿ ಹೋಗಿದ್ದರು. ಆಕಸ್ಮಿಕವಾಗಿ ಕಳೆದ ವಾರ ಅನಾರೋಗ್ಯಕ್ಕೆ ಒಳಗಾಗಿ ಮಂಗಳವಾರ ಕೋಲ್ಲಾಪೂರ ಆಸ್ಪತ್ರೆಯಲ್ಲಿ ನಿಧನ ಹೊಂದಿದರು.

ಬುಧವಾರ ಸ್ವಗ್ರಾಮ ಪಡಗಾನೂರ ತಾಂಡಾಕ್ಕೆ ಸೇನಾವಾಹನದಲ್ಲಿ ಸೇನಾ ಸಿಬ್ಬಂದಿಯೊಂದಿಗೆ ಸೈನಿಕನ ಮೃತದೇಹ ಬರುತ್ತಿದ್ದಂತೆ ನೂರಾರು ಯುವಕರು, ಸಾರ್ವಜನಿಕರು ದೇಶಭಕ್ತರು ಭೋಲೋ ಭಾರತ ಮಾತಾಕೀ ಜೈ, ಜೈಜವಾನ ಜೈಕಿಸಾನ್ ಘೋಷಣೆ ಮೊಳಗಿಸಿದರು. ಸೇನಾ ವಾಹನದಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಭವ್ಯ ಮೆರವಣಿಗೆ ನಡೆಯಿತು. ನಂತರ ಮೃತರ ಅಂತ್ಯಕ್ರಿಯೆ ಸಕಲ ಸರಕಾರಿ ಗೌರವಗಳೊಂದಿಗೆ ನೆರವೇರಿತು. ಅಂತ್ಯಕ್ರಿಯೆಯಲ್ಲಿ ಶಾಸಕ ರಾಜುಗೌಡ ಪಾಟೀಲ, ತಹಶೀಲ್ದಾರ್ ಪ್ರಕಾಶ ಸಿಂದಗಿ, ಡಾ.ರಮೇಶ ರಾಠೊಡ, ಶಂಕರ ರಾಠೋಡ, ಎಲ್.ಆರ್. ಅಂಗಡಿ, ಶ್ರೀಕಾಂತ ರಾಠೋಡ ಸೇರಿದಂತೆ ಪೊಲೀಸ್ ಸಿಬ್ಬಂದಿ, ಪಡಗಾನೂರ, ದೇವರಹಿಪ್ಪರಗಿ, ಶಿವಣಗಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಗಣ್ಯರು, ಯುವಕರು, ಸೈನಿಕರು ಪಾಲ್ಗೊಂಡಿದ್ದರು.





ವಿಜಯಪುರ: ತಮ್ಮ ಸ್ವಗ್ರಾಮ ಮಮದಾಪುರದಲ್ಲಿ ಸರತಿಸಾಲಿನಲ್ಲಿ ನಿಂತು ಮತ ಚಲಾಯಿಸಿದ ಕೆ.ಪಿ.ಸಿ.ಸಿ ಕಾರ್ಯದರ್ಶಿ ಸಂಗಮೇಶ ಬಬಲೇಶ್ವರ

## ನೀರಾಧೆನಾಶ್ಯಾಮ

ಉದಯರಶ್ಮಿ ದಿನಪತ್ರಿಕೆ

**ಕಾವ್ಯರಶ್ಮಿ**

– ಶೀತಲ್ ಹೆಗಡೆ

(“ನಮ್ಮ ಕಥಾ ಅರಮನೆ” ಬರಹಗಾರರು)



ಬಾಳಿನರಥದಲ್ಲಿ ನೀನನಗೆ
ಸಾರಥಿಯಾಗು
ಪ್ರೀತಿಯ ತೊರೆಯಲ್ಲಿ
ಹಾಲಜೇನುಹರಿಸಿ

ಬಾಳಿಗೆ ಬೆಳಕಾಗು ದೀಪದಂತೆ
ತಾ ಉರಿದು ಕತ್ತಲೆ
ತೊಳೆದು ಜಗವೆಲ್ಲ
ಜಗಮಗಿಸು ನಂದಾದೀಪದಂತೆ

ರಾಧಾಶ್ಯಾಮರ ಪ್ರಣಯದ
ಘಮಲು ಪಸರಿಸಿರೆ
ಇವರಿಬ್ಬರ ಒಡನಾಟಕೆ
ಹಣತೆಯದೀಪವು ನಾಚಿಕೊಂಡಿದೆ

ದೇಹವೆರಡು ಜೀವವೊಂದು
ಬಿಟ್ಟಿರಲಾರದ ಭಾವವೊತ್ತು
ಬೇಡುತಿಹರು ಪರಮಾತ್ಮನಲ್ಲಿ
ಅಗಲಿಸದಿರು ತಮ್ಮನೆಂದೂ.




# ಮೇ.9,10 ರಂದು ಬಸವ ಜಯಂತಿ ಕಾರ್ಯಕ್ರಮಗಳು

**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ಪಟ್ಟಣದ ಬಸವೇಶ್ವರ ದೇವಸ್ಥಾನದಲ್ಲಿ ಕೂಡಲಸಂಗಮ ಅಭಿವೃದ್ಧಿ ಮಂಡಳಿಯು ಬಸವ ಜಯಂತಿಯಂಗವಾಗಿ ಮೇ.9,10 ರಂದು ಎರಡು ದಿನಗಳ ಕಾಲ ವಿವಿಧ ಕಾರ್ಯಕ್ರಮುಗಳನ್ನು ಹಮ್ಮಿಕೊಂಡಿದೆ.

ಮೇ. 9 ರಂದು ಬೆಳಗ್ಗೆ 7 ಗಂಟೆಯಿಂದ ದೇವಸ್ಥಾನದಲ್ಲಿ ಶಿವಭಜನೆ ಆರಂಭವಾಗಲಿದೆ. ಸಂಜೆ 6 ಗಂಟೆಗೆ ದೇವಸ್ಥಾನದ ಆವರಣದಲ್ಲಿ ವಿವಿಧ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ರಾತ್ರಿ 9.30 ಗಂಟೆಗೆ ಅಂಕಲಗಿಯ ಜಯಶ್ರೀ ಭಜನಾ ಸಂಘ ಹಾಗೂ ಉಮದಿಯ ಬಾಹುಸಾಹೇಬ ಮಹಾರಾಜ ಭಜನಾ ಸಂಘದಿಂದ ಭಜನಾ ಪದಗಳು ನಡೆಯಲಿವೆ.

ಮೇ. 10 ರಂದು ಬೆಳಗ್ಗೆ 7.30 ಗಂಟೆಗೆ ದೇವಸ್ಥಾನದ ಆವರಣದಲ್ಲಿ ಷಟ್ಸ್ಥಲ ಧ್ವಜಾರೋಹಣ ನೆರವೇರಲಿದೆ. ಬೆಳಗ್ಗೆ 10.30 ಗಂಟೆಗೆ ಬಸವ ಜನ್ಮಸ್ಮಾರಕದಲ್ಲಿ ವಿರಕ್ತಮಠದ ಮುರುಘೇಂದ್ರ ಸ್ವಾಮೀಜಿಯವರ ಸಾನಿಧ್ಯದಲ್ಲಿ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವೇಶ್ವರರ ತೊಟ್ಟಿಲು ಹಾಗೂ ನಾಮಕರಣ ಸಮಾರಂಭ ನಡೆಯಲಿದೆ. ಮಧ್ಯಾಹ್ನ 12.30 ಗಂಟೆಗೆ ಬಸವಜನ್ಮ ಸ್ಮಾರಕದ ಮುಂಭಾಗ, ಬಸವೇಶ್ವರ ದೇವಸ್ಥಾನದ ದಾಸೋಹ ಭವನದಲ್ಲಿ ಮಹಾಪ್ರಸಾದ ವ್ಯವಸ್ಥೆ ಮಾಡಲಾಗಿದೆ.




ಸಂಜೆ 5 ಗಂಟೆಗೆ ದೇವಸ್ಥಾನದ ಆವರಣದಲ್ಲಿ ವಚನ ಚಿಂತನ ಗೋಷ್ಠಿ ನಡೆಯಲಿದೆ. ಸಾನಿಧ್ಯವನ್ನು ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ ವಹಿಸುವರು. ಚಿಂತಕ,ಸಾಹಿತಿ ಪ್ರೊ. ಎಸ್.ಜಿ.ಸಿದ್ದರಾಮಯ್ಯನವರು ಉಪನ್ಯಾಸ ನೀಡಲಿದ್ದಾರೆ. ಇದೇ ಸಂದರ್ಭದಲ್ಲಿ ವಿರೇಶ ವಾಲೀ, ಸಾಕ್ಷಿ ಹಿರೇಮಠ ಅವರಿಂದ ವಚನ ಸಂಗೀತ ಹಾಗೂ ಬೆಂಗಳೂರಿನ ನವ್ಯ ನಾಟ್ಯ ಸಂಗಮ ಅವರಿಂದ ಭಕ್ತಿ ಭಂಡಾರಿ ಬಸವಣ್ಣನವರ ನೃತ್ಯರೂಪಕ ಜರುಗಲಿದೆ. ರಾತ್ರಿ 9.30 ಗಂಟೆಗೆ ಅಲಂಕೃತ ಬಸವೇಶ್ವರರ ಪಲ್ಲಕ್ಕಿ ಹಾಗೂ ಬಸವೇಶ್ವರರ ಭಾವಚಿತ್ರದ ಭವ್ಯ ಮೆರವಣಿಗೆ ಸಕಲ ಮಂಗಲ ವಾದ್ಯವೈಭವದೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜರುಗಲಿದೆ ಎಂದು ಕೂಡಲಸಂಗಮ ಅಭಿವೃದ್ಧಿ ಮಂಡಳಿಯ ಆಯುಕ್ತರಾದ ನಿಂಗಪ್ಪ ಬಿರಾದಾರ ತಿಳಿಸಿದ್ದಾರೆ.

# ಸಂಜೆಯ ಸೂರ್ಯ

**ಭಾವರಶ್ಮಿ**



– ನಯನಾ ಹೆಬ್ಬಾರ್


(“ನಮ್ಮ ಕಥಾ ಅರಮನೆ” ಬರಹಗಾರರು)

ಉದಯರಶ್ಮಿ ದಿನಪತ್ರಿಕೆ

ಕೆಲಸದವರಿಂದ ಅಡಿಕೆ ಸುಲಿಸುತ್ತಿದ್ದ ಮಾಧವರಾಯ ಮನೆಯಿಂದ ಹೊರಗೆ ರಿಕ್ಷಾ ಒಂದು ಬಂದು ನಿಂತ ಶಬ್ದಕ್ಕೆ ಕುಳಿತಲ್ಲಿಂದಲೇ ಕುತ್ತಿಗೆ ಹೊರಹಾಕಿ ನೋಡಿದರೆ ತಂಗಿ ಮಂಗಳಾ ಬರುತ್ತಿದ್ದಳು. ಇದೇನಪ್ಪಾ ಇವತ್ತು ಹೇಳದೆ ಕೇಳದೆ ಬಂದಳು ಅಂತ ಯೋಚಿಸುತ್ತಾ “ಬಾರೇ ಮಂಗಳ... ಎಷ್ಟೊತ್ತಿಗೆ ಹೊರಟೆ “ ಅಂತ ದೇಶಾವರಿ ನಗು ಬೀರುತ್ತಾ ತಂಗಿಯನ್ನು ಸ್ವಾಗತಿಸಿದನು.

ಉಭಯ ಕುಶಲೋಪರಿಗಳು ಮುಗಿದು ಊಟವಾದ ನಂತರ ಮೆಲ್ಲಗೆ ಮಂಗಳ ತಾನು ಬಂದ ಕಾರಣವನ್ನು ಅಣ್ಣ ಅತ್ತಿಗೆಯ ಮುಂದಿರಿಸಿದಳು. ತನ್ನ ಗಂಡ ಆರಂಭಿಸಿದ ಗೇರುಬೀಜ ಸಂಸ್ಕರಣೆಯ ಕಾರ್ಖಾನೆ ನಷ್ಟದಿಂದ ಮುಚ್ಚುವ ಸ್ಥಿತಿಯಲ್ಲಿದೆ ಎಂದೂ , ಏನಾದರೂ ಸಹಾಯ ಮಾಡಿದರೆ ಚೆನ್ನಾಗಿತ್ತು ಅಂತ ಕಣ್ಣೀರಾಗಿ ಬೇಡಿಕೊಂಡಳು. ನಿಜವಾಗಿ ಮಾಧವ ರಾಯನಿಗೆ ಹಣದ ಕೊರತೆ ಏನಿರಲಿಲ್ಲ. ಹಣ ಕೊಟ್ಟರೆ ಹೆಂಡತಿ ಕಡೆಯಿಂದ ನಡೆಯುವ ಸಹಸ್ರನಾಮಾರ್ಚನೆ... ಇವನು ತಡೆದುಕೊಳ್ಳಬೇಕಿತ್ತು ಅಲ್ಲದೆ ಅವನೂ ಮುಂದಿನ ತಿಂಗಳು ಯಾವುದೋ ವ್ಯಾಪಾರಕ್ಕೆ ಹಣ ತೊಡಗಿಸಿಕೊಳ್ಳಬೇಕಿತ್ತು. ಅಲ್ಲದೆ ಹಿಂದೆಯೂ ಯಾವಾಗಲೋ ಅವಳು ಹೀಗೆಯೇ ಕೇಳಿದಾಗ ತಾನು ಒಂದು ಚಿಕ್ಕ ಸಹಾಯ ಮಾಡಿದ್ದೂ ನೆನಪಿತ್ತು.ಮೊದಲೇ ತಂಗಿಯ ಮನೆಯ ಆರ್ಥಿಕ ಸ್ಥಿತಿ ದೇವರೇ ಗತಿ ಅನ್ನುವ ಹಾಗೆ ಇದೆ..ಅಂತದ್ರಲ್ಲಿ ನಾನೇನಾದರೂ ಇವಳ ಕಷ್ಟಕ್ಕೆ ಮರುಗಿ ಸಹಾಯ ಮಾಡಿದರೆ ಅದೇ ರೂಢಿಯಾಗಿ ಬಿಟ್ಟರೆ ....ಮಾಧವರಾಯನ ತಲೆ ಅಣ್ಣ ತಂಗಿಯ ಸಂಬಂಧದ ಆಚೆ ವಾಸ್ತವದ ಪ್ರಪಂಚದಲ್ಲಿ ಓಡುತ್ತಿತ್ತು.

ಮೆಲ್ಲನೆ ಕವಳ ಬಾಯೊಳಗೆ ತುರುಕುತ್ತಾ ತಂಗಿಯೊಡನೆ “ ನೋಡು ... ಕಷ್ಟ ಅಂತ ಪದೇ ಪದೇ ತವರಿನ ಕಡೆ ಮುಖ ಮಾಡಿಕೊಂಡು ನಿಂತರೆ ಅಷ್ಟೊ0ದು ಚೆನ್ನಾಗಿರಲ್ಲ, ನಮಗೂ ಈಗ ಬೆಳೆ ಎಲ್ಲ ಕಡಿಮೆಯೇ ... ಈಗಿನ ಕಾಲದಲ್ಲಿ ಎಷ್ಟೆಂದರೂ ಅವರವರ ತಲೆ ಮೇಲೆ ಅವರವರ ಕೈಯೇ ಬಿಡು..ಬಂದುದಕ್ಕೆ ಏನಾದ್ರೂ ಕೈಗೆ ಸ್ವಲ್ಪ ಹಾಕುವೆ “ ಅಂ-ದಾಗ ಒಳಗಿದ್ದ ಆತನ ಹೆಂಡತಿ ಸರಸ್ವತಿಯೂ ಓಡೋಡಿಕೊಂಡು ಬಂದು “ ಮ0ಗಳಾ ಅಲ್ವೇ, ನಮಗೆಲ್ಲ ತವರಿಗೆ ಸಹಾಯ ಕೇಳಿಕೊಂಡು ಹೋಗಲೇ ಮುಜುಗರ ... ಮದುವೆಯಾದ ಮೇಲೆ ಎಷ್ಟೆಂದರೂ ಕೊಟ್ಟ ಹೆಣ್ಣು ಕುಲದಿಂದ ಹೊರಗೆ ... ಮದುವೆ ಮಾಡಿಕೊಟ್ಟ ನಂತರ ಗಂಡನೇ ಹೆಂಡತಿ ಮಕ್ಕಳನ್ನ ನೋಡ್ಕೋ ಬೇಕು ತಾನೇ ... ತವರಿಗ್ಯಾಕಪ್ಪಾ ಕಳಿಸ್ತಾರೆ “ ಅಂತ ಅಣಕವಾಡಿದಾಗ ಮಂಗಳಳ ಕಣ್ಣುಗಳು ತುಂಬಿದ ಕೊಳಗಳಾದವು. ಒಂದು ನಿಮಿಷವೂ ಅಲ್ಲಿ ಇರದಾದಳು.



“ಅಣ್ಣಾ.. ಹೆಣ್ಣಿನ ಕಷ್ಟಕ್ಕೆ ತವರು ಆಸರೆಯಾಗಿರುತ್ತೆ ಅಂದುಕೊಂಡು ಬಂದೆ. ಅಂದು ಇದೇ ಮನೆ ಕಟ್ಟಲು ಸಾಲ ಸಿಗಬೇಕು ಅಂತೆಲ್ಲಾ ಏನೇನೋ ಹೇಳಿ ನನ್ನಿಂದ ದಾನಪತ್ರಕ್ಕೆ ಸಹಿ ಹಾಕಿಸಿಕೊಂಡು ಅಪ್ಪನ ಇಡೀ ಆಸ್ತಿಯನ್ನು ನಿನ್ನ ಹೆಸರಿಗೆ ಬರೆಸಿಕೊಂಡಿದ್ದೆ. ಆಗ ತವರು ತಣ್ಣಗಿರಲಿ ಅಂತ ನಾನು ಎಲ್ಲವನ್ನೂ ನಿನ್ನ ಕೈಯಲ್ಲಿತ್ತಿದ್ದೆ. ಈಗ ಅದೆಲ್ಲವನ್ನೂ ನೀನು ಮರೆತೆ. ಇದೇ ಕೊನೆ ....ಇನ್ನೆಂದಿಗೂ ನೀನು ಆಸರೆಗಿರುವಿ ಅಂತ ತವರಿನ ಕಡೆ ಬರಲಾರೆ “ ಅಂತ ಅಲ್ಲಿಂದ ಹೊರಟುಬಿಟ್ಟಳು.

ಹಾಗೋ ಹೀಗೋ ಎಲ್ಲಿಂದಲೋ ಕಷ್ಟ ಪಟ್ಟು ಹಣ ಹೊಂದಿಸಿಕೊಂಡ ಮಂಗಳ ಹಾಗೂ ಅವಳ ಗಂಡ ಶಂಕರ ಬಹಳ ಕಷ್ಟ ಪಟ್ಟು ತಮ್ಮ ಕಾರ್ಖಾನೆಯನ್ನು ಮೇಲಕ್ಕೆತ್ತಿದ್ದರು. ಅಣ್ಣ ಅತ್ತಿಗೆ ಮಾಡಿದ ಅವಮಾನ ಅವಳ ಮನಸ್ಸಿನಲ್ಲೊಂದು ಛಲ ಮೂಡಿಸಿತ್ತು. ಹಗಲು ರಾತ್ರಿ ಕಷ್ಟ ಪಟ್ಟು ದುಡಿದರು. ಆರ್ಥಿಕವಾಗಿ ಸುಧಾರಿಸಿ ಕೊಂಡರು. ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ನೀಡಿದರು. ಕ್ರಮೇಣ ಒಳ್ಳೆಯ ಮನೆ ಜಮೀನು ಎಲ್ಲವನ್ನೂ ಮಾಡಿಕೊಂಡರು.

ದಿನಗಳು ಉರುಳುತ್ತಲೇ ಇದ್ದವು . ತವರು ಹಾಗೂ ಮಂಗಳಳ ಸಂಬಂಧ ಅಷ್ಟಕ್ಕಷ್ಟೇ. ಅಣ್ಣನ ಇಬ್ಬರು ಗಂಡು ಮಕ್ಕಳ ಮದುವೆಗೆ ಎಲ್ಲರೂ ಹೋಗಿ ಬಂದಿದ್ದರು. ಅಲ್ಲದೆ ಅಪ್ಪ ಅಮ್ಮನ ತಿಥಿಗೆ ಹೋಗಿ ಬರುತ್ತಿದ್ದಳು..ಅಷ್ಟೇ ಇತ್ತು ತವರಿನ ಬಂಧ. ಅಣ್ಣ ಅಂತೂ ಒಂದು ದಿನವೂ ತಂಗಿಯ ಕಷ್ಟ ಸುಖ ವಿಚಾರಿಸಿ ಕೊಂಡವನಲ್ಲ ... ಕಂಡರೆ ಒಂದಷ್ಟು ಮಾತು ಅಷ್ಟೇ.

ಕಾಲಚಕ್ರ ಸಾಗುತ್ತಿತ್ತು. ಮಂಗಳಳ ಮಗಳು ಮದುವೆಯಾಗಿ ಹೋದರೆ ಮಗ ಅಪ್ಪನ ಜತೆ ಫಾಕ್ಟರಿ ನೋಡಿಕೊಳ್ಳುವುದಕ್ಕೆ ಆರಂಭಿಸಿದ. ಊರಿನಲ್ಲೇ ಶ್ರೀಮಂತ ಕುಟುಂಬವಾಗಿತ್ತು ಅವರದ್ದು. ನಲಿವು ತುಂಬಿದ ಸಂಸಾರ.

ಇತ್ತ ಮಾಧವರಾಯ ತನ್ನೆರಡೂ ಗಂಡು ಮಕ್ಕಳಿಗೂ ಮದುವೆ ಮಾಡಿ ಮುಗಿಸಿದ್ದ. ಮಕ್ಕಳಿಬ್ಬರೂ ಬೇರೆ ಬೇರೆ ಊರಲ್ಲಿದ್ದರು.

ಒಂದು ದಿನ ಮಾಧವನ ಮಡದಿ ಹೃದಯಾಘಾತದಿಂದ ಕುಳಿತಲ್ಲೇ ಮರಣವನ್ನಪ್ಪಿದಾಗ ಮಕ್ಕಳಿಬ್ಬರೂ ಬಂದು ಅಪ್ಪನಲ್ಲಿ ಇದ್ದ ತಾವು ಬದುಕಿದ ಮನೆಯೊಂದನ್ನು ಹಾಗೇ ಇರಿಸಿ ಉಳಿದ ಹೊಲಗದ್ದೆ ತೋಟಗಳನ್ನೆಲ್ಲ ಮಾರಿ .. ನಮ್ಮ ಜತೆ ಬಂದಿರಿ ಅಂತ ಕರಕೊಂಡು ಹೋಗಿದ್ದರೂ, ಅಲ್ಲಿ ಹೊಂದಿಕೊಳ್ಳಲಾರದೆ ತನ್ನ ಮನೆಗೇ ಬಂದಿಳಿದಿದ್ದ ಮಾಧವರಾಯ. ವೃದ್ಧಾಪ್ಯ , ಒಂಟಿತನ , ತಾನೇ ಮಾಡಿಕೊಳ್ಳುವ ರುಚಿ ಇಲ್ಲದ ಅಡುಗೆ, ಮಕ್ಕಳು ಮಾರಿ ಹೋದ ಈಗ ಬೇರೆಯವರ ಪಾಲಾದ ಹೊಲ ಗದ್ದೆ ತೋಟಗಳು... ಇವುಗಳ ನೋವನ್ನೆಲ್ಲಾ ಅನುಭವಿಸುತ್ತಾ,ಅತ್ತ ಸಾಯದೆ, ಇತ್ತ ಬದುಕಲಾರದೆ ಕಣ್ಣೀರು ಸುರಿಸುತ್ತಿದ್ದ.

ಒಂದು ದಿನ ಬೆಳಗ್ಗೆ ಅವನ ಮನೆ ಮುಂದೆ ಕಾರೊಂದು ನಿಂತಿತ್ತು. ಯಾರೆಂದು ಮಾಧವರಾಯ ದೃಷ್ಟಿ ಹಾಯಿಸಿದಾಗ ಅದರಿಂದ ಮಂಗಳ ಹಾಗೂ ಆಕೆಯ ಮಗ ಇಬ್ಬರೂ ಇಳಿದರು.

ಅಣ್ಣನ ಬಳಿ ಬಂದ ಮಂಗಳ ಆತನ ಸ್ಥಿತಿ ನೋಡಲಾರದೆ ಅತ್ತಳು. ಮಾಧವರಾಯನಿಗೋ ಆಕೆಗೆ ಮಾಡಿದ್ದ ಅವಮಾನದ ಪಶ್ಚಾತಾಪದ ಕಣ್ಣೀರು ಇಳಿದಿತ್ತು.

ಅಣ್ಣನೆದುರು ನಿಂತ ಮಂಗಳ ಆತನಲ್ಲಿ “ನಿನ್ನನ್ನು ನಮ್ಮ ಮನೆಗೆ ಮನೆಗೆ ಕರೆದುಕೊಂಡು ಹೋಗಲು ಬಂದಿರುವೆ , ಹೊರಡು “ ಎಂದಳು. ಆತನಿಗೋ ಆಶ್ಚರ್ಯ ... ದು:ಖ ಎರಡೂ ಏಕಕಾಲಕ್ಕೆ ಉ0ಟಾದವು. ಅಂದು ಅವಮಾನಿಸಿ ಕಳಿಸಿದವಳು ಇಂದು ತನ್ನನ್ನು ಅಪಹಾಸ್ಯ ಮಾಡಲು ಬಂದಿರುವಳೇನೋ ಅ0ತ ಅಂದುಕೊಂಡರೆ ..... ಇವಳು ಬೇರೆ ಏನೋ ಅನ್ನುತ್ತಿದ್ದಾಳಲ್ಲಾ ....

ಅಣ್ಣನ ಮನಸ್ಸನ್ನ ಅರಿತವಳಂತೆ ಆತನ ಬಳಿಗೆ ಹೋಗಿ ಕೈ ಹಿಡುಕೊಂಡು ಹೇಳಿದಳು “ ಅಣ್ಣಾ ... ಕೊಟ್ಟ ಹೆಣ್ಣು ಕುಲದಿಂದ ಹೊರಗಿರಬಹುದು. ಆದರೆ ಆ ಹೆಣ್ಣಿಗೆ ತವರು ಎಂದೂ ಹೊರಗಲ್ಲ. ಅವಳಿಗೆ ತವರು ಎ0ದಿಗೂ ತನ್ನದೇ. ಗಂಡನ ಮನೆಯಲ್ಲಿ ಎಷ್ಟೇ ಸಂಪತ್ತಿದ್ದರೂ ಆಕೆಯ ಮನಸ್ಸಿನ ಮಿಡಿತ ತವರಿನ ಕಡೆಗೆಯೇ.... ನೀನಿಲ್ಲಿ ಈ ರೀತಿ ನೋವನ್ನನುಭವಿಸುತ್ತಿದ್ದರೆ ಅಲ್ಲಿ ನಾ ಹೇಗೆ ಸಂತೋಷವಾಗಿರಲಿ?”

ನೀನಂದು ನನಗೆ ಅವಮಾನಿಸಿದೆ ಅನ್ನುವ ನೋವು ಈಗಿಲ್ಲ. ಆ ಮಾತಿನ ಕಿಚ್ಚಿನಿಂದಲೇ ಮನಸಿನಲ್ಲಿ ಹಠ ಮೂಡಿ ಇಂದು ಈ ಸ್ಥಿತಿಗೆ ತಲುಪಿರುವೆ. ನನ್ನೊಂದಿಗೆ ಹೊರಡು. ಮನೆಯವರೆಲ್ಲರೂ ನಿನ್ನನ್ನ ಪ್ರೀತಿಯಿಂದಲೇ ನೋಡಿಕೊಳ್ಳುತ್ತಾರೆ. ಚಿಂತೆ ಬಿಡು” ಎಂದಾಗ ಮಾಧವರಾಯ “ ನೀನು ನನ್ನ ತಂಗಿಯಲ್ಲ ಕಣೇ .ತಾಯಿ ... ಎರಡನೇ ತಾಯಿ” ಅಂತ ಅತ್ತಾಗ ತವರಿನ ನೆಲದಲ್ಲಿ ಏನೋ ಹೊಸ ಬೆಳಕು ... ಹೊಸ ಭಾವ..ಜೀವಂತಿಕೆ...

ಮಾಧವರಾಯನನ್ನು ಹೊತ್ತ ಕಾರು ಸಂತಸದಿಂದ ಮಂಗಳೆಯ ಮನೆಯ ಕಡೆ ಸಾಗುತ್ತಿತ್ತು.ಸಂತಸಗೊಂಡ ಸೂರ್ಯ ಸಂಜೆಯ ಜಗವ ಮತ್ತಷ್ಟು ರಂಗಾಗಿಸಿದ್ದ.

**Printed by:** AVINASH BIDARI, **Published and Onwed by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR